(MR. SPEAKER.)

Wednesday, the 30th November 1955 and that the election, if necessary, will take place on Thursday the 1st December 1955 in the Assistant Secretary's room between the hours of 3 P.M. and 5 P.M. The election will be conducted as laid down in sub-rule (2) of rule 137 of the Rules of Procedure and Conduct of Business in the Mysore Legislative Assembly in accordance with the principle of proportional representation by means of single transferable vote.

Objectionable remarks made by a Member.

Sri D. DEVARAJA URS (Hunsur).—The other day I raised a point of order regarding certain remarks made by an Hon'ble Member of this House, Sri Bheemappa Naik. You were pleased to say that you will give the ruling later. I want to know what has happened to it.

Mr. SPEAKER.—Regarding what point?

***Sri D. DEVARAJ URS.**–I have raised two points: that is, the Hon'ble Member should not only withdraw the word but he should also apologise. The other day, the Hon'ble Member was pleased to withdraw the word. But in regard to the other point about apology, you were pleased to say that you would give a ruling. I stated on the floor of the House that it was a matter concerning the privilege of this House as also of the Member affected. I want to know what has happened to that.

Mr. SPEAKER.—I will give a statement today afternoon or tomorrow.

Next item on the agenda.

STATES REORGANISATION COMMISSION REPORT

Motion to consider—(contd.)

ಶ್ರೀ ಎಚ್. ಕೆ. ವೀರಣ್ಣಗೌಡ (ಮದ್ದೂರು).—ಸ್ವಾಮಿ, S.R.C. ವರದಿ ಬಗ್ಗೆ ಕೆಲವು ದಿನಗಳಿಂದ ಮಾನ್ಯ ಸಭೆಯ ಸದಸ್ಯರು ಮಾತನಾಡಿ ನಮಗೆ ಸಂಬಂಧಿಸಿದಂತೆ ಮೈಸೂರು ಒಳಗೊಂಡಂಥ ಕರ್ಣಾಟಕ ಪ್ರಾಂತವಾಗಬೇಕೇ ಅಥವಾ ಮೈಸೂರನ್ನು ಬಿಟ್ಟು ಕರ್ಣಾಟಕ ಏರ್ಪಾಡು ಆಗಬೇಕೇ ಎನ್ನುವ ವಿಚಾರದಲ್ಲಿ ಚರ್ಚೆ ನಡೆದಿದೆ. ಈ ಸಂಬಂಧವಾಗಿ ನಡೆದ ಚರ್ಚೆಯನ್ನೂ ಮತ್ತು ಮೈಸೂರು ಸರ್ಕಾರದವರು ನೇಮಕ ಮಾಡಿದ ಅಂಕಿ ಅಂಶಗಳ ಸಮಿತಿಯ ವರದಿಯಮೇಲೆ ನಡೆದ ಚರ್ಚೆಯನ್ನೂ ಕೇಳಿದಮೇಲೆ ಅವರವರ ವಾದದಿಂದ ಮತ್ತೊಬ್ಬರ ಅಭಿಪ್ರಾಯವನ್ನು ಬದಲಾಯಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲವೆಂಬುದು ನನಗೆ ಮನದಟ್ಟಾಗಿದೆ.

ಶ್ರೀ ಜೆ. ಮಹಮ್ಮದ್ ಇಮಾಂ (ಜಗಳೂರು).—ಆ ರೀತಿಯಾಗಿರುವುದು ಈ ಸಭೆಯಲ್ಲಿಯೋ ಅಥವಾ ಪ್ರಪಂಚದ ಎಲ್ಲಾ ಕಡೆಗಳಲ್ಲಿಯೋ ?

ಶ್ರೀ ಎಚ್. ಕೆ. ವೀರಣ್ಣಗೌಡ.—ನಮಗೆ ಸಂಬಂಧಪಟ್ಟಂಥ ಪ್ರಶ್ನೆ ಮೈಸೂರನ್ನೊಳಗೊಂಡು ಕರ್ಣಾಟಕ ಏಕೀಕರಣವಾಗಬೇಕೇ ಅಥವಾ ಮೈಸೂರನ್ನು ಬಿಟ್ಟು ಏಕೀಕರಣವಾಗಬೇಕೇ ಎಂಬುದು, ಇದನ್ನು ವಾದದಲ್ಲಿ ಜಯಿಸುತ್ತೇವೆ, ಇತರರ ಮನಸ್ಸನ್ನು ಬದಲಾಯಿಸುತ್ತೇವೆ ಎಂದು ಹೇಳಿದರೆ ಅದು ಕಂಠಶೋಷಣೆಯಾಗುತ್ತದೆ. ಕೆಲವು ಸ್ನೇಹಿತರು ಭಾಷಣ ಮಾಡುವಾಗ ಅವರ ವಾದ ಸರಣಿಯಲ್ಲಿ ಏನೇನು ಉದಾಹರಣೆಗಳನ್ನು ಹೇಳಿದರೋ, ಏನೇನು ವಾದಗಳನ್ನು ಹೂಡಿದರೋ, ಅವಕ್ಕೆ ಉತ್ತರರೂಪದಲ್ಲಿ ಪ್ರತಿಯಾಗಿ ಹೇಳದೇ ಇದ್ದರೆ ಅವರು ಹೇಳಿದ್ದೇ ನಿಜವೋ ಎಂಬ ಭಾವನೆ ಉಂಟಾಗುತ್ತದೆ. ಆ ಭಾವನೆ ಸರಿಯಲ್ಲ. ಒಂದು ನಾಣ್ಯಕ್ಕೆ ಎರಡು ಮುಖಗಳಿವೆ. ಇದು ತಮ್ಮ ತಮ್ಮ ಮೂಗಿನ ನೇರಕ್ಕೆ ಹೇಳುವ ನ್ಯಾಯವೇ ಹೊರತು ಎಲ್ಲರಿಗೂ ಇದು ವೇದವಾಕ್ಯವಲ್ಲ ಎಂದು ಹೇಳುವ ಉದ್ದೇಶದಿಂದ ನಾನು ಎದ್ದು ನಿಂತುಕೊಂಡು ಮಾತನಾಡುತ್ತಾ ಇರುವುದು. ಇದರಲ್ಲಿ ಇನ್ನೊಂದು ವಿಚಾರವಿದೆ. ಈ ಪ್ರಶ್ನೆ ಈ ಸಭೆಯ ಮುಂದೆ ಬರುವುದಕ್ಕೆ ಕಾರಣವನ್ನು ಯೋಚನೆ ಮಾಡಬೇಕು. ನಮ್ಮ ಹಿರಿಯರೆಲ್ಲರೂ ಸೇರಿ ಮಾಡಿರುವ ರಾಜ್ಯಾಂಗದ ನೆರಳಿನಲ್ಲಿ ನಾವು ಇವೊತ್ತು ಜೀವನ ಮಾಡುತ್ತಿದ್ದೇವೆ. ಆ ಶಾಸನದಲ್ಲಿ ಒಂದು ಮಾತು ಹೇಳಿದ್ದಾರೆ. ಇಂಡಿಯಾ ದೇಶದಲ್ಲಿ ಸಂಸ್ಥಾನಗಳ ಗಡಿಯನ್ನು ಬದಲಾಯಿಸತಕ್ಕ, ಸಂಸ್ಥಾನಗಳನ್ನು ದೊಡ್ಡದು ಚಿಕ್ಕದು ಮಾಡತಕ್ಕ ಮತ್ತು ಹೊರಗಡೆಯಿಂದ ಬರತಕ್ಕ ಪ್ರದೇಶಗಳನ್ನು ಸೇರಿಸಿಕೊಳ್ಳತಕ್ಕ ಅಧಿಕಾರ ಪಾರ್ಲಿಮೆಂಟಿಗೆ ಇದೆ ಎಂದು ಆ ಕಾನೂನಿನಲ್ಲಿ ಉಲ್ಲೇಖಿಸಿದೆ. ಹೀಗೆ ಗಡಿ ಬದಲಾವಣೆ ಮಾಡಬೇಕಾಗಿದ್ದರೆ ಅದೇ ಶಾಸನದಲ್ಲಿ ಇನ್ನೊಂದು ವಿಚಾರ ಉಲ್ಲಿಖಿತವಾಗಿದೆ. ಅದೇನೆಂದರೆ, ಸಂಬಂಧಪಟ್ಟ ಸಂಸ್ಥಾನಗಳ ಪ್ರಜಾಭಿಪ್ರಾಯ ಅಥವಾ ಶಾಸನ ಸಭೆಗಳ ಅಭಿಪ್ರಾಯವನ್ನು—ಆ ಅಭಿಪ್ರಾಯದ ಪ್ರಕಾರ ನಡೆಯದೆ ಇದ್ದರೂ—ತಿಳಿದುಕೊಳ್ಳಬೇಕೆಂದು ಇದೆ. ಆದ್ದರಿಂದ ಇಂಡಿಯಾ ಸರ್ಕಾರದವರು, ಜನಾಭಿಪ್ರಾಯಕ್ಕನುಸಾರವಾಗಿ ಜನಗಳ ಒತ್ತಾಯದಿಂದ ಪ್ರಾಂತಗಳ ಗಡಿ ವಿಚಾರಕ್ಕೆ ಒಂದು ಸಮಿತಿಯನ್ನು ನೇಮಕವಾಡಿ ಅವರ ವರದಿ ಬಂದ ಮೇಲೆ, ಆ ವರದಿಯಮೇಲೆ ಜನಾಭಿಪ್ರಾಯ ಮತ್ತು ಶಾಸನ ಸಭೆಗಳ ಅಭಿಪ್ರಾಯ ಏನಿದೆ ಎಂಬುದನ್ನು ತಿಳಿದುಕೊಂಡು ಬಹುಮತಾಭಿಪ್ರಾಯಕನುಸಾರವಾಗಿ ಒಂದು ಮಸೂದೆಯನ್ನು ರಚನೆಮಾಡಿ ಪಾರ್ಲಿಮೆಂಟಿನ ಮುಂದೆ ಇಡುವ ಉದ್ದೇಶದಿಂದ, ಬೇರೆ ಬೇರೆ ಸಂಸ್ಥಾನಗಳು ಆ ವರದಿಯನ್ನು ಪರಿಶೀಲನೆ ಮಾಡಿ ಆಯಾ ಪ್ರಾಂತದ ಶಾಸನ ಸಭೆಗಳ ಅಭಿಪ್ರಾಯವನ್ನು ಸಂಗ್ರಹಿಸಬೇಕೆಂದು ನಮ್ಮ ಮುಂದೆ ಆ ವರದಿಯನ್ನು ಇಟ್ಟಿದ್ದಾರೆಂದು ತಿಳಿದುಕೊಂಡಿದ್ದೇನೆ.

ಇವೊತ್ತು ಇಂಡಿಯಾ ದೇಶದಲ್ಲಿ ಪ್ರಾಂತ್ಯಗಳ ಪುನರ್ವಿಂಗಡಣೆ ಜನಾಭಿಪ್ರಾಯಕ್ಕನುಸಾರವಾಗಿ ಆಗಬೇಕು ಎಂದು ಕಾಂಗ್ರೆಸ್ ಸಂಸ್ಥೆಯವರು ಬಹುಮತದಿಂದ ನಿರ್ಧಾರ ಮಾಡಿದ್ದಾರೆ. ಕಾಂಗ್ರೆಸ್‌ನವರು ನೇಮಕಮಾಡಿದ ಸರ್ಕಾರಗಳು ಕೇಂದ್ರದಲ್ಲೂ ಅನೇಕ ಸಂಸ್ಥಾನಗಳಲ್ಲೂ ಆಡಳಿತ ನಡೆಸುತ್ತಾ ಇವೆ. ಕಾಂಗ್ರೆಸ್ಸಿನ ಅಭಿಪ್ರಾಯ ಸರ್ಕಾರದ ಅಭಿಪ್ರಾಯವಾಗಿರುವುದರಿಂದ ಕಾಂಗ್ರೆಸ್ಸಿನ ನೀತಿ ಅಂಗೀಕಾರವಾಗುವುದರಲ್ಲಿ ಯಾವ ಸಂದೇಹವೂ ಇಲ್ಲ. ಪಾರ್ಲಿಮೆಂಟಿನಲ್ಲಾದರೂ ಅಷ್ಟೇ. ಎಲ್ಲೆಲ್ಲಿ ಕಾಂಗ್ರೆಸ್ ಸರ್ಕಾರಗಳು ಆಡಳಿತ ನಡೆಸುತ್ತಿವೆಯೋ ಮತ್ತು ಎಲ್ಲೆಲ್ಲಿ ಕಾಂಗ್ರೆಸ್ ಬಹುಮತವಿರುವ ಶಾಸನಸಭೆಗಳಿವೆಯೋ ಅಲ್ಲೆಲ್ಲಾ ಕಾಂಗ್ರೆಸ್ ಸಂಸ್ಥೆಯ ಒಂದು ತೀರ್ಮಾನ, ಒಂದು ನೀತಿ ಅಂಗೀಕಾರವಾಗಿಯೇ ಆಗುತ್ತದೆ, ಬಲವಂತದಿಂದಲಾದರೂ ಅದು ಅಂಗೀಕಾರವಾಗುತ್ತದೆ. ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಸಂಸ್ಥೆಯವರು ಕಾಂಗ್ರೆಸ್ ಸದಸ್ಯರಿಗೆ ಆದೇಶ ಕೊಟ್ಟು, ಅವರು ಹೇಗೆ ನಡೆದುಕೊಳ್ಳಬೇಕೆಂದು ತಿಳಿಸಿದ ಮೇಲೆ, ಅನೇಕ ವರ್ಷಗಳಿಂದಲೂ ಶಿಸ್ತಿನ ಸಿಪಾಯಿಗಳು ಎನಿಸಿಕೊಂಡು, ದೇಶದ ಸ್ವಾತಂತ್ರ್ಯಕ್ಕೆ ಯಾವರೀತಿ ಹೋರಾಟಮಾಡಿ, ದೇಶದಲ್ಲಿ ರಾಜ್ಯಾಡಳಿತವನ್ನು ವಹಿಸಿದ್ದಾರೋ, ಅಂಥ ಕಾಂಗ್ರೆಸ್‌ನವರು ಅಂಥ ಆದೇಶಕ್ಕೆ ತಲೆಬಾಗಲೇಬೇಕಾಗುತ್ತದೆ. ಹೀಗೆ ತಲೆಬಾಗಿದರೆ ಜನಾಭಿಪ್ರಾಯವನ್ನು ಜನರ ಪ್ರತಿನಿಧಿಗಳು ತಮ್ಮ ಮನಬಿಚ್ಚಿ ಹೇಳುವುದಕ್ಕೆ ಸಾಧ್ಯವೇ ಎಂಬುದನ್ನು ನಾವು ಯೋಚಿಸಬೇಕು. ಹಾಗೆ ಸಾಧ್ಯವಿಲ್ಲದಿದ್ದ ಮೇಲೆ, ಶಾಸನ ಸಭೆಗಳ ಅಭಿಪ್ರಾಯವನ್ನು ತಿಳಿಸಿ ಎಂದರೆ, ಆ ಅಭಿಪ್ರಾಯ ನಿಷ್ಪಕ್ಷಪಾತವಾಗಿ ಅವರವರ ಮನಸ್ಸಿನಲ್ಲಿದ್ದಂಥ ಅಭಿಪ್ರಾಯವೇ ಅಥವಾ ಆಡಳಿತ ನಡೆಸತಕ್ಕ ಸಂಸ್ಥೆಯ ಒತ್ತಾಯದಮೇಲೆ ಹೇಳುವ ಅಭಿಪ್ರಾಯವೇ ಎಂಬ ಪ್ರಶ್ನೆ ನಮ್ಮ ಮುಂದೆ ಬರುತ್ತದೆ. ಇವೊತ್ತು ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ಸು ಸರ್ಕಾರವನ್ನು ನಡೆಸುತ್ತಿದೆ. ಕಾಂಗ್ರೆಸ್ ಸದಸ್ಯರ ಬಹುಮತವಿರುವ ಶಾಸನಸಭೆ ಸರ್ಕಾರ ನಿರ್ವಹಣೆಯನ್ನು ಹೊತ್ತಿದೆ. ಕಾಂಗ್ರೆಸ್ ಸದಸ್ಯರು ಹೀಗೆ ಮಾತನಾಡಬೇಕು, ಇಂಥ ಅಭಿಪ್ರಾಯವನ್ನೇ ವ್ಯಕ್ತಪಡಿಸಬೇಕು, ಎಂದು ಒಂದು ಆದೇಶ ಬಂದಿರುವಾಗ ಇಲ್ಲಿ ಬಹುಮಂದಿ ಇರುವ ಕಾಂಗ್ರೆಸ್ ಸದಸ್ಯರು ತಮ್ಮ ಅಭಿಪ್ರಾಯವನ್ನು ಮನಃಪೂರ್ವಕವಾಗಿ, ಆತ್ಮಸಾಕ್ಷಿಯಾಗಿ ಕೊಡುವುದಕ್ಕೆ ಅವಕಾಶವಿದೆಯೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಎದ್ದಿದೆ. ಈ ಸಂದಿಗ್ಧ ಸಮಯದಲ್ಲಿ, ನನಗೆ ಬಹಳ ಬಿಕ್ಕಟ್ಟಿನ ಪ್ರಸಂಗ ಒದಗಿದೆ. ಈ ಸಂದರ್ಭದಲ್ಲಿ ಒಂದು ಪುರಾಣದ ಕಥೆ ಜ್ಞಾಪಕಕ್ಕೆ ಬರುತ್ತದೆ. ಪಿತೃವಾಕ್ಯ ಪರಿಪಾಲನೆಮಾಡಿ ತಾಯಿ ಕೊಲೆ ಮಾಡಬೇಕೇ ಅಥವಾ ಪಿತೃವಾಕ್ಯ ಪರಿಪಾಲನೆ ಮಾಡದೆ ತಾಯಿ ಪ್ರಾಣವನ್ನು ಉಳಿಸಬೇಕೇ ಎಂದು ಯಾವ ಪರಿಸ್ಥಿತಿ ಪರಶುರಾಮನಿಗೆ ಉಂಟಾಗಿತ್ತೋ ಇಂದು ಅಂಥದೇ ಪರಿಸ್ಥಿತಿ ನಮ್ಮ ಮುಂದಿದೆ. ಇವೊತ್ತು ನಮ್ಮ ಸಂಸ್ಥೆಯ ನಾಯಕರ ಮಾತನ್ನು ಮನ್ನಿಸಿ, ಮೈಸೂರು ಸಂಸ್ಥಾನವನ್ನು ಕೊಲೆಮಾಡಬೇಕೇ ? ಅಥವಾ ಅಭಿಪ್ರಾಯವನ್ನು ವಿರೋಧಿಸಿ, ಮೈಸೂರು ಸಂಸ್ಥಾನವನ್ನು ಉಳಿಸಬೇಕೇ ಎನ್ನುವ ಪ್ರಶ್ನೆ ನಮ್ಮ ಮುಂದೆ ಎದ್ದಿದೆ. ನನ್ನಮಟ್ಟಿಗೆ ಮಾತನಾಡುವುದಾದರೆ, ಹೇಗೆ ಪುರಾಣದಲ್ಲಿ ಪಿತೃವಾಕ್ಯ ದೊಡ್ಡದೆಂದು ತಿಳಿದು ಹಿಂದುಮುಂದೆ ನೋಡದೆ ತಾಯಿಯನ್ನು ಕೊಂದ ಕಥೆಯ ಜೊತೆಗೆ, ತಾನೇ ಸರ್ವಜ್ಞ, ತನ್ನನ್ನು ಬಿಟ್ಟರೆ ಯಾರೂ ದೊಡ್ಡವರಿಲ್ಲ ತಾನೇ ದೇವರು ಎಂದು ಹೇಳಿದ ತಂದೆಯನ್ನು ಧಿಕ್ಕರಿಸಿ ಆತನಿಗಿಂತಲೂ ಮತ್ತು ತನಗಿಂತಲೂ ದೊಡ್ಡವನು ಬೇರೊಬ್ಬನಿದ್ದಾನೆ ಎಂದು ಹೇಳಿದ ಪ್ರಹ್ಲಾದನ ಚರಿತ್ರೆಯೂ ಇದೆ. ಈ ಇಬ್ಬರು ಪುರಾಣಪುರುಷರ ಪೈಕಿ ಯಾರನ್ನು ಅನುಸರಿಸಬೇಕು ಎಂದು ನನ್ನ ಮನಸ್ಸಿನಲ್ಲಿ ತಳಮಳವುಂಟಾಗಿದೆ. ಈ ದಿನವೇ ಈ ವಿಷಯವನ್ನು ನಿರ್ಧಾರಮಾಡತಕ್ಕ ಅವಶ್ಯಕತೆ ಇಲ್ಲ ಎನ್ನುವ ಅಲ್ಪ ಸಮಾಧಾನ ನನಗೆ ಆಗಿದೆ. ಇವೊತ್ತು ಮಾತನಾಡಬಹುದು, ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು. ಓಟು ಕೊಡುವಾಗ ಮಾತ್ರ ನಿರ್ಬಂಧವಿದೆ. ಓಟಿನ ಪ್ರಶ್ನೆ ನಾಳಿದ್ದು ಬರುತ್ತದೆಂದು ಕಾಣುತ್ತದೆ. ಆದ್ದರಿಂದ ಇವೊತ್ತು, ನಾಳೆ ನಮ್ಮ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದು ಎನ್ನುವ ಅಲ್ಪ ಸಮಾಧಾನ ನಮ್ಮಲ್ಲಿ ಕೆಲವರಿಗೆ ಉಂಟಾಗಿದೆ.

ಸ್ವಾಮಿ, ಇದುವರೆಗೆ ವರದಿಯಮೇಲೆ ಆಗಿರತಕ್ಕ ಚರ್ಚೆಯಲ್ಲಿ ಹೂಡಿದ ವಾದಗಳ ಬಗ್ಗೆ ಕೆಲವು ಅಂಶಗಳನ್ನು ಈ ಸಭೆಯ ಮುಂದಿಡುವುದಕ್ಕೆ ತಮ್ಮ ಅಪ್ಪಣೆಯನ್ನು ಬೇಡುತ್ತೇನೆ. ಮಾನ್ಯ ಸದಸ್ಯರು ಅನೇಕ ವಾದಗಳನ್ನು ಹೂಡಿದ್ದಾರೆ. ಅದರಲ್ಲಿ ಕೆಲವನ್ನು ಗುರುತುಹಾಕಿಕೊಂಡಿದ್ದೇನೆ. ನಾನು ಮೊದಲೇ ಹೇಳಿದಂತೆ ಈ ವಾದದಿಂದ ಯಾರನ್ನೂ ಗೆಲ್ಲುವುದಕ್ಕಾಗುವುದಿಲ್ಲ, ಅದು ಕೇವಲ ಕಂಠ ಶೋಷಣೆಯಾಗುತ್ತದೆ. ಆದರೂ ಆತ್ಮತೃಪ್ತಿಗಾಗಿ ಸವಾಲಗೆ ಜವಾಬು ಕೊಟ್ಟಹಾಗಾಗುತ್ತದೆ. ಮೊದಲನೆಯದಾಗಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಭಾಷಾವಾರು ಪ್ರಾಂತ್ಯಗಳ ಅಂಗೀಕಾರಮಾಡಿದೆ ಮತ್ತು ಮೈಸೂರು ಸಂಸ್ಥಾನದ ಕಾಂಗ್ರೆಸ್ಸು ಕರ್ಣಾಟಕ ಏಕೀಕರಣ ಅಥವಾ ಕರ್ಣಾಟಕ ಪ್ರಾಂತ್ಯ ರಚನೆಯನ್ನು ಒಪ್ಪಿಕೊಂಡಿರುವುದರಿಂದ ಈಗ ಅದನ್ನು ಯಾವ ಬಾಯಿಂದ ಬದಲಾವಣೆಯಾಗಬೇಕನ್ನುತ್ತೀರಿ, ಎನ್ನುವ ವಾದ ನಮ್ಮ ಮುಂದಿದೆ; ಒಪ್ಪಿಕೊಂಡದ್ದನ್ನು ತಿರಸ್ಕಾರ ಮಾಡುವುದು ಯೋಗ್ಯವೇ ಎನ್ನುವ ಪ್ರಶ್ನೆ ಎದ್ದಿದೆ. ಈ ವಾದ ಎಷ್ಟರಮಟ್ಟಿಗೆ ಸರಿಯಾಗಿದೆ ಅಥವಾ ತಪ್ಪಾಗಿದೆಯೆಂಬುದು ವರದಿಯನ್ನು ಓದುವುದರಿಂದಲೇ ಗೊತ್ತಾಗುತ್ತದೆ. ಇದಕ್ಕೆ ಇನ್ನೊಂದು ರೂಪ, ಮುಖ, ಸಹ ಇದೆ ಎಂಬುದನ್ನು ಈ ವರದಿಯ ಕೆಲವು ವಾಕ್ಯಗಳಿಂದ ವ್ಯಕ್ತಪಡಿಸಬಹುದಾಗಿದೆ. ಉದಾಹರಣೆಗೆ ಭಾಷಾವಾರು ಪ್ರಾಂತ ರಚನೆಯ ವಾದ ಇವೊತ್ತು ಹೂಡಿದ್ದಲ್ಲ. 1905ನೆ ಇಸವಿಯಲ್ಲಿ ಅದು ಆರಂಭವಾಯಿತು. 1905ನೆ ಇಸವಿಯಲ್ಲಿ ಬಂಗಾಳ ವಿಭಜನೆಯಾದಾಗ ಒಂದೇ ಭಾಷೆ ಮಾತನಾಡುವವರಿಗೆ ಎರಡು ಸಂಸ್ಥಾನಗಳನ್ನು ಮಾಡಬಾರದು ಒಂದೇ ಸಂಸ್ಥಾನ ಮಾಡಬೇಕು ಎಂಬ ಬಂಗಾಳದ ಚಳವಳಿ ಹುಟ್ಟಿ ಅದೇ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಪೀಠಿಕೆಯಾಗಿ ಈ ಸ್ವಾತಂತ್ರ್ಯ ಚಳವಳಿ ಅರ್ಧ ಶತಮಾನದವರೆಗೆ ಪ್ರಬಲವಾಗಿ ನಡೆದು ನಮಗೆ ಸ್ವಾತಂತ್ರ್ಯ ದೊರೆಯಿತು. ಈ ರೀತಿ ಬಂಗಾಳ ವಿಭಜನೆಯೇ ಸ್ವರಾಜ್ಯ ಹೋರಾಟದ ಕೂಗಾಗಿ ಪರಿಣಮಿಸಿತು. ಬಂಗಾಳ ವಿಭಜನೆಯಾಗುವ ಹಿಂದಿನಿಂದಲೂ ಭಾಷಾವಾರು ಪ್ರಾಂತ್ಯವಾಗಬೇಕು ಎನ್ನುವ ವಾದವಿತ್ತು. ಆಗ ಕಾಂಗ್ರೆಸ್ ಸಂಸ್ಥೆಯಿರಲಿಲ್ಲ. ಆಗಲೂ ಸಹ ತಿಳಿದವರು ಭಾಷಾವಾರು ಪ್ರಾಂತವಾಗಬೇಕೆನ್ನುವುದು ಸರಿಯಲ್ಲವೆಂದು ಹೇಳಿದ್ದಾರೆ, ಇದಕ್ಕೆ ಕೆಲವು ಉದಾಹರಣೆಗಳನ್ನು ಇಲ್ಲಿ ಕೊಡಬಹುದಾಗಿದೆ. ಈ ವರದಿಯ 10 ಮತ್ತು 11ನೆಯ ಪುಟಗಳಲ್ಲಿ ನಾನು ಹೇಳತಕ್ಕ ಮಾತಿಗೆ

(ಶ್ರೀ ಹೆಚ್. ಕೆ. ವೀರಣ್ಣಗೌಡ.)

ಉದಾಹರಣೆಗಳು ಸಿಕ್ಕುತ್ತವೆ. ಈ ವರದಿಯ 10ನೆಯ ಪುಟವನ್ನು ನೋಡುವುದಾದರೆ ಅಲ್ಲಿ,

"The linguistic principle was, however, pressed into service. . . . . only as a measure of administrative convenience, and to the extent it fitted into a general pattern which was determined by political exigencies."

ಎಂದು ಹೇಳಿದ್ದಾರೆ. ಹನ್ನೆರಡು ವರ್ಷವಾದ ಮೇಲೆ ಇಂಡಿಯನ್ ಸ್ಟ್ಯಾಟ್ಯುಟರಿ ಕಮಿಷನ್‌ನವರು ಇದನ್ನು ಪರಿಶೀಲಿಸಿ

"Most important of all perhaps, for practical purposes, is the largest possible measure of general agreement on the changes proposed, both on the side of the area that is gaining, and on the side of the area that is losing, territory."

ಎಂದು ಹೇಳಿದ್ದಾರೆ. ಅಂದ ಮೇಲೆ ಭಾಷಾವಾರು ಪ್ರಾಂತ ರಚನೆಯ ತತ್ವ ಆಗಿನಿಂದಲೂ ಇದ್ದರೂ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ಸಿನವರು ಈ ತತ್ವವನ್ನು ಒಪ್ಪಿಕೊಂಡಿದ್ದಾರೆಂದು ಹೇಳುವುದಾದರೂ, ಮೊದಲಿನಿಂದಲೂ ಈ ತತ್ವ ತಿದ್ದುಪಾಟಾಗಬೇಕೆಂಬ ವಾದಕ್ಕೂ ಇದು ಒಳಗಾಗಿಯೇ ಇದೆ. 1917ನೆಯ ಇಸವಿಯಲ್ಲಿ, ಕಾಂಗ್ರೆಸ್ ಸಂಸ್ಥೆಯವರು ರಾಜ್ಯಾಡಳಿತ ನಮ್ಮ ಕೈಗೆ ಬಂದ ಮೇಲೆ ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ಪುನರ್ವಿಂಗಡಣೆ ಮಾಡೋಣ, ಸದ್ಯಕ್ಕೆ ನಮ್ಮ ಸಂಸ್ಥೆಯ ಆಡಳಿತವನ್ನೇಕೆ ಭಾಷಾವಾರು ಪ್ರಾಂತ ಸಂಸ್ಥೆಗಳಿಗೆ ಒಳಗು ಮಾಡಬಾರದು; ಎಂದು ಯೋಚಿಸಿ ಸಿಂಧ್, ಮತ್ತು ಆಂಧ್ರಗಳನ್ನು ಪ್ರತ್ಯೇಕ ಕಾಂಗ್ರೆಸ್ ಪ್ರಾಂತಗಳಾಗಿ ಮಾಡಿದಾಗ ಡಾ॥ ಅನಿಬೆಸೆಂಟ್ ಪಕ್ಷದವರು ಅದನ್ನು ತೀವ್ರವಾಗಿ ವಿರೋಧಿಸಿದರು. ಇದು ಕೂಡ ವರದಿಯಲ್ಲಿ ನಮೂದಾಗಿದೆ.

"However at this stage, Congress opinion had not clearly crystallised is favour of linguistic provinces and at the session of 1917 the principle was strongly opposed by the group led by Dr. Annie Besant."

ರಾಜ್ಯಾಡಳಿತಕ್ಕಾಗಲಿ, ಕಾಂಗ್ರೆಸ್ ಸಂಸ್ಥೆಯ ಆಡಳಿತಕ್ಕಾಗಲಿ ಭಾಷಾವಾರು ಪ್ರಾಂತ ರಚನೆಯ ತತ್ವವನ್ನಿಟ್ಟುಕೊಳ್ಳಬಾರದೆಂಬುದು ನಮ್ಮ ಹಿರಿಯರಲ್ಲಿ ಕೆಲವರ ಅಭಿಪ್ರಾಯವಾಗಿತ್ತು ಎಂಬುದನ್ನು ಉದಹರಿಸುವುದಕ್ಕಾಗಿ ಮಾತ್ರ ನಾನು ಈ ವಿಷಯ ಇಷ್ಟು ವಿವರವಾಗಿ ಪ್ರಸ್ತಾಪಿಸಿದ್ದೇನೆ.

ಅನಂತರ ಕಾಂಗ್ರೆಸ್ ಸಂಸ್ಥೆಗೆ ಅಧಿಕಾರ ಬರುತ್ತಲೇ ಆ ಸಂಸ್ಥೆಯ ಮೇಲೆ ಜನರ ಒತ್ತಾಯ ಹೆಚ್ಚಿದ ಮೇಲೆ 1927ನೆಯ ಇಸವಿಯಲ್ಲಿ ಪಂಡಿತ ನೆಹರೂ ಸಮಿತಿಯು ನೇಮಕವಾದಾಗ, ಅವರು ಹೀಗೆ ಹೇಳಿದ್ದಾರೆ.

"The main considerations must necessarily be the wishes of the people and the linguistic unit of the area concerned."

ಇದನ್ನು ಯಾವ ಉದ್ದೇಶದಿಂದ ಹೇಳುತ್ತಿದ್ದೇನೆಂದರೆ, ಯಾವ ಸಂಸ್ಥೆಯಿಂದ ಈ ಹೊತ್ತು ಈ ವಿಷಯದಲ್ಲಿ ನಮಗೆ ಒಂದು ಆದೇಶ ಬಂದಿದೆಯೋ ಅದೇ ಸಂಸ್ಥೆಯಲ್ಲಿ ಹಿಂದೆ ಇದ್ದ ಹಿರಿಯರು ಇದೇ ವಿಷಯವನ್ನು ಕೂಲಂಕಷವಾಗಿ ವಿಚಾರ ಮಾಡಿದಾಗ ಏನು ಅಭಿಪ್ರಾಯ ಕೊಟ್ಟಿದ್ದಾರೆ ಎಂಬುದನ್ನು ತಿಳಿಸುವುದಕ್ಕಾಗಿ ಹೇಳುತ್ತಿದ್ದೇನೆ. ಸ್ಟೀಮ್ ರೋಡ್ ರೋಲರ್ ಹಾಕಿ ಸದಸ್ಯರ ಬಾಯಿಕಟ್ಟಿ ಇದನ್ನು ಆಚರಣೆಗೆ ತರಬೇಕೆ ಅಥವಾ ಭಿನ್ನಾಭಿಪ್ರಾಯಕ್ಕೂ ಮನ್ನಣೆ ಕೊಡಬೇಕೆ ಎಂಬುದನ್ನು ತೋರಿಸುವುದಕ್ಕೆ ಈ ಕೆಲವು ವಾಕ್ಯಗಳನ್ನು ಈ ವರದಿಯಿಂದ ಓದುತ್ತಿದ್ದೇನೆ.

ಅನಂತರ ಧಾರ್ ಕಮಿಷನ್ ನೇಮಕವಾಯಿತು. ಭಾರತಕ್ಕೊಂದು ರಾಜ್ಯಾಂಗವನ್ನು ರಚನೆ ಮಾಡಲು ನೇಮಕವಾದ ಭಾರತ ರಾಜ್ಯಾಂಗ ರಚನಾಸಭೆಯ ಮುಂದೆ ಈ ಭಾಷಾವಾರು ಪ್ರಾಂತ ರಚನೆಯ ಒತ್ತಾಯ ಬಂದಾಗ ಆ ಸಭೆಯವರು ಧಾರ್ ಕಮಿಷನ್ ನೇಮಕ ಮಾಡಿದರು. ಈ ಸಮಿತಿಯವರು ರಾಜ್ಯಾಂಗ ಸಭೆಗೆ ತಮ್ಮ ವರದಿಯನ್ನೊಪ್ಪಿಸಿದ್ದಾರೆ. ಅದರಲ್ಲಿ

"It follows from the terms of reference of this Commission that reconstitution of provinces solely on a linguistic basis was no longer taken for granted."

ಎಂದು ಹೇಳಿದ್ದಾರೆ. ಬರಿಯ ಭಾಷೆಗಳ ಆಧಾರದ ಮೇಲೆಯೇ ಪ್ರಾಂತಗಳನ್ನು ರಚನೆ ಮಾಡಬೇಕೆನ್ನುವುದು ಕಡ್ಡಾಯವಾಗಿಲ್ಲವೆಂದು ಹೇಳುತ್ತಾರೆ. ಆ ಕಮಿಷನಿನವರು ಪ್ರಾಂತ ಪುನರ್ವಿಂಗಡಣೆಗೆ ಆಡಳಿತಾನುಕೂಲ ದೃಷ್ಟಿಯೇ ಮುಖ್ಯವಾಗಿರಬೇಕೆಂದು ಹೇಳಿದ್ದಾರೆ. ಆ ಕಮಿಷನ್ ವರದಿಯಲ್ಲಿರುವ ವಾಕ್ಯ ಹೀಗಿದೆ:

"The Commission felt that in forming provinces the emphasis should be primarily on administrative convenience."

ಅಲ್ಲದೆ, ಪ್ರಾಂತ ಪುನರ್ವಿಂಗಡಣೆ ಮಾಡಬೇಕಾದರೆ ನಾಲ್ಕಾರು ಮುಖ್ಯ ವಿಷಯಗಳನ್ನು ಗಮನಿಸಬೇಕೆಂದೂ ಅವರು ಹೇಳಿದ್ದಾರೆ.

"(1) Geographical contiguity, (2) financial self-sufficiency, (3) Administrative convenience, (4) capacity for futnre development, and (5) a large measure ef agreement within its borders and amongst the people speaking the same language in regard to its formation, care being taken that the new provinces should not be forced by a majority of people speaking the same language."

ಅಂದರೆ (1) ಭೌಗೋಳಿಕ ಸಂಬಂಧ, (2) ಹಣಕಾಸಿನ ಸ್ವಾವಲಂಬನೆ, (3) ಆಡಳಿತಾನುಕೂಲ, (4) ಮುಂದಿನ ಅಭಿವೃದ್ಧಿಗವಕಾಶ ಮತ್ತು (5) ಒಂದೇ

ಭಾಷೆಯನ್ನಾಡುವ ಪ್ರಾಂತಗಳ ಗಡಿಗಳಲ್ಲಿರುವ ಮತ್ತು ಒಳಗಡೆ ಇರುವ ಜನರ ಸಾಮಾನ್ಯ ಒಮ್ಮತದ ಅಭಿಪ್ರಾಯ ಮುಖ್ಯ. ಹಾಗೂ ಹೊಸ ಪ್ರಾಂತವನ್ನು ಒಂದೇ ಭಾಷೆಯನ್ನಾಡುವ ಜನರು ಬಹುಮತದಿಂದ ಅದೇ ಮಾತಾಡುವ ಅಲ್ಪ ಸಂಖ್ಯೆಯ ಜನರ ಮೇಲೆ ಒತ್ತಾಯದಿಂದ ಹೇರಬಾರದು ಎಂದು ಹೇಳಿದ್ದಾರೆ. ಆಮೇಲೆ ರಾಜ್ಯಾಂಗ ರಚನೆಯಾದನಂತರ 1951 ನೆಯ ಇಸವಿಯಲ್ಲಿ ಹೊಸದಾಗಿ ಶಾಸನ ಸಭೆಗಳಿಗೆ ಚುನಾವಣೆ ನಡೆದ ಕಾಲದಲ್ಲಿ, ಅಂದರೆ ನಮ್ಮನ್ನು ಈ ಸಭೆಗೆ ಚುನಾವಣೆ ಮಾಡುವ ಕಾಲದಲ್ಲಿ, ಕಾಂಗ್ರೆಸ್ ಸಂಸ್ಥೆಯವರು ಒಂದು ಚುನಾವಣೆ ಘೋಷಣೆಯನ್ನು "ಮ್ಯಾನಿಫೆಸ್ಟೊ" ಹೊರಡಿಸಿದರು. ಅದರಲ್ಲಿ ಹಿಂದಿನಿಂದಲೂ ಇರುವ ಭಾಷಾವಾರು ಪ್ರಾಂತ ರಚನೆಯ ವಿಷಯದಲ್ಲಿ ಕಾಂಗ್ರೆಸ್ಸಿನ ಅಭಿಪ್ರಾಯವೇನೆಂಬುದನ್ನು ಇದೇ ಬೆಂಗಳೂರು ನಗರದ ಲಾಲ್‌ಬಾಗ್‌ನಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಅಧಿವೇಶನದಲ್ಲಿ ತಿಳಿಸಿದ್ದಾರೆ. ಅದರಲ್ಲಿ ಪ್ರಾಂತ ಪುನರ್ವಿಂಗಡಣೆ ವಿಚಾರದ ನಿರ್ಧಾರ ಕಟ್ಟಕಡೆಯದಾಗಿ ಸಂಬಂಧಪಟ್ಟ ಜನರ ಇಷ್ಟಕ್ಕನುಸಾರವಾಗಿರುತ್ತದೆ ಎಂದು ತಿಳಿಸಿ, ಭಾಷೆಯ ಕಾರಣ ಮುಖ್ಯವಾಗಿದ್ದರೂ ಆರ್ಥಿಕ ಆಡಳಿತ ಮತ್ತು ಹಣಕಾಸಿನ ಕಾರಣಗಳೂ ಇವೆ ಎಂದು ಆ ಘೋಷಣೆಯಲ್ಲಿ ಉಲ್ಲೇಖಿತವಾಗಿವೆ.

> "The manifesto declared that the decision about the re-organisation of States would ultimately depend on the wishes of the people concerned but expressed the opinion that, while linguistic reasons were important, there were other factors also, such as economic, administrative and financial considerations, which had to be taken into account."

ಈ ವಾಕ್ಯಗಳನ್ನು ಎತ್ತಿ ಹೇಳುವುದರಲ್ಲಿ, ನನ್ನ ಉದ್ದೇಶವಾದರೂ ಇಷ್ಟೆ: ಈ ವರದಿಯನ್ನು ನಾನು ಒಪ್ಪುವುದಿಲ್ಲ. ನಾನು ಹೇಳುತ್ತಿರುವುದು ಈ ವರದಿಯ ಕರ್ತೃಗಳ ಅಭಿಪ್ರಾಯವಲ್ಲ, ಅವರು ಉದಹರಿಸಿರುವ ಇತರ ಹಿರಿಯರ ಅಭಿಪ್ರಾಯ. ಭಾಷಾವಾರು ಪ್ರಾಂತ ರಚನೆಯ ಕೂಗು ಒಂದು ಕಾಲದಲ್ಲಿ ಸರಿಯೆಂದು ಕಂಡಿದ್ದರೂ ಆಮೇಲೆ ಅದು ಸರಿಯೆಂದು ಕಾಣಲಿಲ್ಲ. ಬರಿಯ ಭಾಷೆಯನ್ನೇ ಮುಖ್ಯವೆಂದಿಟ್ಟುಕೊಂಡು ಯಾವ ಪ್ರಾಂತವನ್ನೂ ರಚನೆ ಮಾಡಬಾರದೆಂದು ಹಿಂದೆಯೇ ಹಿರಿಯರು ಹೇಳಿದ್ದಾರೆ. ಕೇಂದ್ರ ಸರ್ಕಾರ ಈ ಕಮಿಷನನ್ನು ನೇಮಕ ಮಾಡುವಾಗಲೂ ಸಹ ಭಾಷೆಯನ್ನೇ ಆಧಾರವಾಗಿಟ್ಟುಕೊಳ್ಳಬಾರದೆಂದು ಈ ಸಮಿತಿಗೆ ಆದೇಶವನ್ನು ಕೊಟ್ಟಿದ್ದಾರೆ. ಆದಕಾರಣ ಭಾಷೆಯನ್ನು ಪ್ರಧಾನವಾಗಿಟ್ಟುಕೊಂಡು ಪ್ರಾಂತ ರಚನೆ ಮಾಡಬೇಕೆಂಬ ತತ್ವವನ್ನು ಕಾಂಗ್ರೆಸ್ ಸಂಸ್ಥೆಯವರು ಒಪ್ಪಿಕೊಂಡಿದ್ದಾರೆಂದು ಹೇಳುವ ವಾದದಲ್ಲಿ ತಿರುಳಿಲ್ಲವೆಂದು ಹೇಳುತ್ತೇನೆ.

ಮೈಸೂರಿನವರು ಅಖಂಡ ಕರ್ಣಾಟಕವಾಗಬೇಕೆಂದು ಹೇಳಿದ್ದಾರೆನ್ನುವುದೂ ಸರಿಯಾದುದಲ್ಲ. ಮೈಸೂರನ್ನೊಳಗೊಂಡ ಕರ್ಣಾಟಕವನ್ನು ರಚನೆ ಮಾಡಬೇಕೆಂದು ಹೇಳುವುದು ಇತ್ತೀಚಿನ ಮಾತು. ರಾಷ್ಟ್ರ ಸ್ವಾತಂತ್ರ್ಯವಾದಮೇಲೆ ಈ ಕೂಗು ಗಟ್ಟಿಯಾಗಿ ಕೇಳಿ 1951-52ರಲ್ಲಿ ಪ್ರಬಲವಾಯಿತು. ಇದು ಹಿಂದೆ ಇರಲಿಲ್ಲ. ಹಿಂದೆ ಮದರಾಸು ಆಧಿಪತ್ಯ, ಬೊಂಬಾಯಿ ಆಧಿಪತ್ಯದಲ್ಲಿದ್ದ ಕನ್ನಡದವರ ಪ್ರತಿನಿಧಿಗಳ ಸಂಖ್ಯೆ ಆಯಾ ಸರ್ಕಾರದಲ್ಲಿ ಕಡಮೆಯಾಗಿದ್ದು ಆಯಾ ಪ್ರಾಂತದ ಶಾಸನ ಸಭೆಗಳಲ್ಲಿ ತಮ್ಮ ಪ್ರಾಂತಗಳ ಪ್ರಗತಿಯ ಬಗ್ಗೆ ಪ್ರಭಾವವನ್ನು ಬೀರಲು ಅವಕಾಶವಿಲ್ಲದೆ, ತಮ್ಮ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲದೆ, ಅವರ ಕಿರುಕುಳಕ್ಕೊಳಗಾಗಿದ್ದರು. ಆದ್ದರಿಂದ ಕರ್ಣಾಟಕ ಪ್ರಾಂತ ರಚನೆಯಾಗಬೇಕೆಂಬ ಕೂಗು ಎದ್ದಿತು. ಈ ಕೂಗು ನ್ಯಾಯವಾದುದೆಂದು ಮನವರಿಕೆಯಾಗಿ ಕರ್ಣಾಟಕ ಏಕೀಕರಣವಾದಕ್ಕೆ ಮನ್ನಣೆ ಕೊಟ್ಟಿದ್ದರೇ ಹೊರತು, ಮೈಸೂರನ್ನೊಳಗೊಂಡ ಕರ್ಣಾಟಕ ಏಕೀಕರಣವಾಗಬೇಕೆಂದಲ್ಲ. ಇತ್ತೀಚೆಗೆ ಏಳೆಂಟು ವರ್ಷಗಳಿಂದೀಚೆಗೆ ಮೈಸೂರೊಳಗೊಂಡು ಕರ್ಣಾಟಕ ಏಕೀಕರಣವಾಗಬೇಕೆಂಬ ಕೂಗು ಕೇಳಿಬರುತ್ತಿದೆ.

ನಮ್ಮ ಸ್ನೇಹಿತರು ಕೆಲವರು, 'ದಾವಣಗೆರೆಯಲ್ಲಿ ರಾಜಕೀಯ ಪಕ್ಷಗಳ ಸಮ್ಮೇಳನದಲ್ಲಿ ಏನಾಯಿತು! ನಮ್ಮ ಪ್ರಮುಖ ನಾಯಕರಾದ ಶ್ರೀ ಎಚ್. ಸಿ. ದಾಸಪ್ಪನವರು ಅಲ್ಲಿ "I cannot conceive the idea of formation of Karnataka without Mysore" ಎಂದು ಹೇಳಿ, ಈ ಹೊತ್ತು ಏಕೆ ಹೀಗೆ ಹೇಳುತ್ತಿದ್ದಾರೆ!' ಎಂದು ಆಕ್ಷೇಪಣೆ ತೆಗೆದರು. ಹೌದು, ಇದೆಲ್ಲ ರಾಜಕೀಯ. ಒಂದು ವಾದ ಎಷ್ಟು ಸರಿ ಅಥವಾ ತಪ್ಪು ಎಂದು ಹೇಳುವುದು ಆಯಾ ಸಂದರ್ಭಕ್ಕನುಸಾರವಾಗಿರುತ್ತದೆ. ರಾಜಕೀಯವೇ ಹಾಗೆ. ಆಗ ಮೈಸೂರು ಸರ್ಕಾರವನ್ನೆದುರಿಸುವುದು ಸಾಧ್ಯವಿಲ್ಲವೆಂದು ಮೈಸೂರವರು ಹೆದರಿದ್ದರು. ಆಗ ಮಿರ್ಜಾಸಾಹೇಬರು ಅಧಿಕಾರದಲ್ಲಿದ್ದರು. ಅವರೂ ಅವರನಂತರ ಅಧಿಕಾರಕ್ಕೆ ಬಂದವರೂ ಈ ಪ್ರಜಾಪ್ರಭುತ್ವದ ಕೂಗು ಸುಳ್ಳು ಎಂದು ಹೇಳಿ ನಮ್ಮನ್ನು ಬಗ್ಗು ಬಡಿದರು. ಪ್ರಜಾಪ್ರಭುತ್ವದ ಧೋರಣೆಯೇ ಇರಲಿಲ್ಲ. ಆದುದರಿಂದ ಮೈಸೂರಿನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗುವುದೇ ಇಲ್ಲವೆಂಬ ಹೆದರಿಕೆ ಇತ್ತು. ಆಗ ನಮ್ಮ ಅಕ್ಕಪಕ್ಕದ ಮದರಾಸು, ಬೊಂಬಾಯಿ ಪ್ರಾಂತಗಳಲ್ಲಿ 1937ರಲ್ಲಿ ಕಾಂಗ್ರೆಸ್ ಸರ್ಕಾರಗಳು ಆಡಳಿತ ನಡೆಸುತ್ತಿದ್ದವು. ಆದುದರಿಂದ ಅವರ ಬೆಂಬಲ ಪಡೆದರೆ ನಮಗೂ ಅನುಕೂಲವಾಗಬಹುದೆಂಬ ಉದ್ದೇಶದಿಂದ ಆಗ ಮೈಸೂರೊಳಗೊಂಡ ಕರ್ಣಾಟಕ ಏಕೀಕರಣವಾಗಲೆಂದು ಹಾರೈಸಿದೆವು. ಆದರೆ, ಉತ್ತರ ಕರ್ಣಾಟಕದ ಸ್ನೇಹಿತರು ಆಗ ಏನು ಹೇಳಿದರು ? ಈ ನೇಟೀವ್ ಸ್ಟೇಟ್ಸ್ ಅಥವಾ ದೇಶೀಯ ಸಂಸ್ಥಾನಗಳನ್ನು ಕುತ್ತಿಗೆಗೆ ಕಟ್ಟಿಕೊಂಡರೆ ನಮ್ಮ ಪ್ರಗತಿಗೆ ಧಕ್ಕೆ ಬರುತ್ತದೆ ಎಂದು ಅವರು ಹೇಳಿದರು. 'ನಿಮ್ಮನ್ನು ಸೇರಿಸಿಕೊಳ್ಳಲು ನಮ್ಮಿಂದ ಸಾಧ್ಯವಿಲ್ಲ ನಮ್ಮನ್ನು ಬಿಡಿ, ಆಮೇಲೆ ನೋಡೋಣ' ಎಂದು ಅವರು ವಾದಿಸಿದರು. ಈಗ 'ನಮ್ಮನ್ನು ನಿಮ್ಮ ಜೊತೆಗೆ ಸೇರಿಸಿಕೊಳ್ಳಿ' ಎಂದು ಹೇಳುತ್ತಾರೆ. ನಾವೇಕೆ ಸೇರಿಸಬೇಕು ! ಆಗ ಅವರು ನಮ್ಮನ್ನು ಧಿಕ್ಕಾರ ಮಾಡಿದರು. ಈಗ ನಾವು ಆಗುವುದಿಲ್ಲವೆಂದು ಹೇಳಿದರೆ ಅದರಲ್ಲಿ ಅನ್ಯಾಯವೇನು ? ಹೀಗಿರುವಾಗ ದಾವಣಗೆರೆಯಲ್ಲಿ ಏನು ಮಾಡಿದಿರಿ ಎಂದು ಕೇಳಿದರೆ ಆಗೇಕೆ ನಮ್ಮನ್ನು ಅವರ ಜೊತೆಗೆ ತೆಗೆದುಕೊಳ್ಳಲಿಲ್ಲ ಎಂದು ನಾನು ಕೇಳುತ್ತೇನೆ.

ಶ್ರೀ ಎ. ಭೀಮಪ್ಪನಾಯಕ್.—ನಮ್ಮ ಮಾತಿಗೆ ಮನ್ನಣೆ ಕೊಟ್ಟೇ ಕರ್ಣಾಟಕವಾಗಲೆಂದು ಒಪ್ಪಿಕೊಂಡಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—ಸ್ವಾಮಿ, ವಾದಕ್ಕೆ ವಾದ. ನಮ್ಮನ್ನು ಬಿಟ್ಟು ತಾವು ಮುಂದೆ ಹೋಗಬೇಕೆಂದು ಆಗ 'ಮೈಸೂರಿಲ್ಲದಿದ್ದರೂ ಚಿಂತೆಯಿಲ್ಲ, ನಾವು ಮುಂದುವರಿಯೋಣ'ವೆಂದು ಅವರು ಹೇಳಿದರು. ಈಗಲೂ ಹಾಗೆಯೇ ಮಾಡಲಿ. ನಮ್ಮಲ್ಲಿ ಏಕೆ ಬರುತ್ತೀರಿ ಎಂದು ಈ ಹೊತ್ತು ನಾನು ಕೇಳುತ್ತೇನೆ. ಆ ಹೊತ್ತು ಅವರು ಹಾಗೆ ಹೇಳಿದರು, ಈ ಹೊತ್ತು ನಾವು ಹೀಗೆ ಹೇಳುತ್ತಿದ್ದೇವೆ. ಅವರಲ್ಲಿ ಸಂಪತ್ತಿಗೆ ಕಡಮೆಯಿಲ್ಲ. ಖನಿಜ ಸಂಪತ್ತು, ಅರಣ್ಯ ಸಂಪತ್ತು ಇವಕ್ಕೆ ಕಡಮೆಯಿಲ್ಲ, ಸಮುದ್ರತೀರವಿದೆ, ಲಕ್ಷಾಂತರ ಟನ್ ಮೀನುಗಳು ಸಿಕ್ಕುತವೆ, ಅಲ್ಲಿ ಮೇಧಾ ಶಕ್ತಿಗೆ ಕಡಮೆಯಿಲ್ಲ, ಕಾಡು ಮೇಡುಗಳಿಗೂ ಕಡಮೆಯಿಲ್ಲ. ಅಲ್ಲಿನವರು ಕೇಂದ್ರಸರ್ಕಾರದಲ್ಲಿ ಮಂತ್ರಿಗಳಾಗಿದ್ದಾರೆ, ಬೇರೆ ಪ್ರಾಂತದ ಗೌರ್ನರ್ ಆಗಿದ್ದಾರೆ. ಅಲ್ಲಿ ಕವಿಗಳಿದ್ದಾರೆ, ಗ್ರಂಥಕರ್ತರಿದ್ದಾರೆ. ಹೀಗೆ ಮೇಧಾ ಶಕ್ತಿಯಲ್ಲಾಗಲಿ, ಸಂಪತ್ತಿನಲ್ಲಾಗಲಿ ಏತರಲ್ಲಿಯೂ ನಮಗಿಂತ ಕಡಮೆಯಾಗಿಲ್ಲ. ಹೀಗಿರುವಾಗ, 'ಅಯ್ಯೋ ಅವರು ಕಷ್ಟದಲ್ಲಿದ್ದಾರೆ'ಂದು ಏಕೆ ಹೇಳುವುದು ? ಅವರು ಪಾತಳ ಲೋಕದಲ್ಲಿದ್ದ ಹಾಗೂ ನಾವು ಸ್ವರ್ಗಲೋಕದಲ್ಲಿದ್ದ ಹಾಗೂ ಏಕೆ ಮಾತನಾಡುವುದು ? ಒಂದುಕಡೆ ತೊಂದರೆಯಲ್ಲಿರುವವರ ಬಗ್ಗೆ ನಾವು ವಿಶಾಲ ಮನಸ್ಸಿನಿಂದ, ಉದಾರಮನಸ್ಸಿನಿಂದ ಅವರನ್ನು ಸೇರಿಸಿಕೊಳ್ಳ ಬೇಕೆಂದು ಹೇಳುತ್ತಾರೆ. ಇನ್ನೊಂದು ಕಡೆ, ಅವರೇನೂ ಐಶ್ವರ್ಯದಲ್ಲಿ ಕಡಮೆ ಇಲ್ಲ ಎಂದು ಹೇಳುತ್ತಾರೆ! ಅವರಲ್ಲಿ ಸಹಾನುಭೂತಿ ತೋರಿಸಿ ಎಂದು ಹೇಳುವುದು, ಇನ್ನೊಂದು ಕಡೆ ಅವರಿಗೇನೂ ಕಡಮೆಯಿಲ್ಲ ಎಂದು ಹೇಳುವುದು ! ಅವರು ನಮಗಿಂತ ಉತ್ತಮ ಸ್ಥಿತಿಯಲ್ಲಿದ್ದರೆ, ನಾವು ಹೆಮ್ಮೆ ಪಡುತ್ತೇವೆ, ಸಂತೋಷಪಡುತ್ತೇವೆ, ನಾವೂ ಅವರ ಸ್ಥಿತಿಗೆ ಏರುವುದಕ್ಕೆ ಆಶೆಪಡುತ್ತೇವೆ. ಆದರೆ ಅದೇ ಮಾತಿನಲ್ಲಿ 'ಅವರನು ಕೈ ಹಿಡಿದು ಕಾಪಾಡಿ' ಎಂದು ಏಕೆ ಹೇಳುತ್ತಾರೆ? ಇದು ಸಮಂಜಸವಾಗಿಲ್ಲ. ಒಟ್ಟಿನಲ್ಲಿ ನಾನು ಹೇಳುವುದಿಷ್ಟೆ! ಅವರಿಗೆ ಕಷ್ಟವಿತ್ತು, ಇದನ್ನು ಒಪ್ಪಿಕೊಂಡಿದ್ದಾರೆ. ಹೈದರಾಬಾದು, ಮದರಾಸು, ಬೊಂಬಾಯಿ ಪ್ರಾಂತಗಳ ಶಾಸನ ಸಭೆಗಳಲ್ಲಿ ಕನ್ನಡದ ಸದಸ್ಯರು ಕಡಮೆ ಸಂಖ್ಯೆಯಲ್ಲಿದ್ದಾರೆ. ಈ ಹೊತ್ತು ಮೈಸೂರು ಬಳ್ಳಾರಿಯನ್ನು ಬಿಟ್ಟು 29 ಸಾವಿರ ಚಿಲ್ಲರೆ ಚದರಮೈಲಿಯಷ್ಟಿದೆ. ಬಳ್ಳಾರಿ ಸೇರಿದಮೇಲೆ 33 ಸಾವಿರ ಚದರಮೈಲಿಯಾಗಿದೆ. ಕನ್ನಡ ಮಾತನಾಡುವವರಿರುವ ಪ್ರದೇಶವೆಲ್ಲಾ ಒಟ್ಟು ಸೇರಿದರೆ ಸುಮಾರು 72 ಸಾವಿರ ಚದರ ಮೈಲಿಯಷ್ಟಾಗುತ್ತದೆ.

ಅಂದರೆ ಈಗ ಮೈಸೂರು ಸಂಸ್ಥಾನವಾಗಿ 32,000 (ಚಿಲ್ಲರ) ಅಥವ 33 ಸಾವಿರ ಚದರ ಮೈಲಿಗಳ ವಿಸ್ತೀರ್ಣವನ್ನು ಬಿಟ್ಟರೆ ಅಲ್ಲಿನ ವಿಸ್ತೀರ್ಣವೂ 40,000 (ಚಿಲ್ಲರೆ)ಯಷ್ಟಾಗುತ್ತದೆ. ಮೈಸೂರು ಸಂಸ್ಥಾನದ ಪ್ರಜಾ ಸಂಖ್ಯೆ 9,20,000 ಆದರೆ ಅಲ್ಲಿನ ಪ್ರಜಾ ಸಂಖ್ಯೆಯೂ 92-93 ಲಕ್ಷವಾಗುತ್ತದೆ. ಮೈಸೂರಿಗಿಂತ ಹೆಚ್ಚು ಸಂಪತ್ಸಮೃದ್ಧಿವಾಗತಕ್ಕ ಒಂದು ಸಂಸ್ಥಾನವಾಗುವಾಗ ಅದನ್ನೇಕೆ ಮಾಡಿಕೊಳ್ಳಬಾರದು ?

ಒಬ್ಬ ಸದಸ್ಯರು.—ಅದು compact ಆಗಿರುವುದಿಲ್ಲವೆಂದು ಹೇಳಿದ್ದಾರೆ.

ಶ್ರೀ ಎಚ್. ಕೆ. ವೀರಣ್ಣಗೌಡ.—Compact ಏಕೆ ಆಗಿರುವದಿಲ್ಲ! ಭೂಪಟವನ್ನು ಬೇಕಾದರೆ ತೆಗೆದು ನೋಡಿ. ಒಂದು ಗೆರೆ ಅತ್ತಕಡೆಯಿಂದ ಇತ್ತಕಡೆಗೆ ಎಳೆದುನೋಡಿ. ಕನ್ನಡ ಮಾತನಾಡುವ ಭಾಗಗಳನ್ನು ಸೇರಿಸಿ, ಮೈಸೂರು ಗಡಿಯ ಉತ್ತರಕ್ಕೆ ಪಶ್ಚಿಮದಿಂದ ಪೂರ್ವಕ್ಕೆ ಒಂದುಗೆರೆ ಎಳೆದರೆ ಸಾಕು. Compact ಆದ ದೇಶವಾಗುತ್ತದೆ. ಆದ್ದರಿಂದ ಎರಡು ಸಂಸ್ಥಾನಗಳಾಗುವುದಕ್ಕೆ ಸಾಕಷ್ಟು ನೆಲೆಯಿದೆ, ಸಾಕಷ್ಟು ಜನವಿದೆ; ಸಂಪತ್ತು, ತಿಳಿವಳಿಕೆ, ಮೇಧಾಶಕ್ತಿ ಎಲ್ಲಾ ಇರುವಾಗ ಅಲ್ಲಿಗೆ ಒಂದು ಸರ್ಕಾರ ಏರ್ಪಡಿಸಿ, ಅಲ್ಲಿಗೆ ಒಂದು ಲೆಜಿಸ್ಲೇಚರ್ ಏರ್ಪಡಿಸಬಹುದು. ಅಲ್ಲಿಗೇ ಒಬ್ಬರು ಚೀಫ್ ಮಿನಿಸ್ಟರಾಗುವುದಕ್ಕೆ ಅವಕಾಶವಿದೆ. ಅಂಥಾದ್ದನ್ನೆಲ್ಲಾ ಬಿಟ್ಟು ಇಲ್ಲಿಗೆ ಬರುತ್ತೇವೆ; ಒಬ್ಬರೇ ಛೀಫ್ ಮಿನಿಸ್ಟರ್ ಇದ್ದರೂ ಪರವಾಗಿಲ್ಲ; ನಾವೇನೂ ಇನ್ನು ಹತ್ತುವರುಷಗಳತನಕ ನಮ್ಮ ಕಡೆಯವರನ್ನು ಚೀಫ್ ಮಿನಿಸ್ಟರ್ ಮಾಡಿರೆಂದು ಕೇಳುವುದಿಲ್ಲವೆಂದು ಭರವಸೆ ಕೊಡುತ್ತೇವೆಂದು ಹೇಳುವುದಾದರೂ ಏಕೆ? ಒಂದು ವೇಳೆ ಹಾಗೆ ಭರವಸೆ ಕೊಟ್ಟರೆಂದರೂ ಕೂಡ, ಈಗ ಯಾರೋ ಒಬ್ಬರು ಹೇಳಿದರೆಂದು ಹೇಳಿ ಮುಂದೆ ಬರುವಂಥ ಸದಸ್ಯರುಗಳ ಹಕ್ಕು ಬಾಧ್ಯತೆಗಳನ್ನು ಕಿತ್ತುಕೊಳ್ಳುವುದಕ್ಕೆ ನಾವು ಯಾರು ? ಅವರು ಯಾರು ? ಮೈಸೂರು ಸಂಸ್ಥಾನದವರೇ ನಮ್ಮ ಮುಖ್ಯ ಮಂತ್ರಿಗಳಾಗಿರಲಿ, ಮೈಸೂರಿನ ರಾಜಪ್ರಮುಖರನ್ನೇ ಮುಂದೆಯೂ ಇಟ್ಟುಕೊಳ್ಳುತ್ತೇವೆ ಎಂದು ಹೇಗೆತಾನೆ ಈ ಪ್ರಜಾಪ್ರಭುತ್ವದಲ್ಲಿ ಹೇಳುವುದಕ್ಕೆ ಸಾಧ್ಯ? ಪ್ರಜಾ ಪ್ರಭುತ್ವದಲ್ಲಿ ರಾಜನೇ ಇರಕೂಡದೆಂದಿರುವಾಗ ಈ ರೀತಿ ಹೇಳಿದರೆ ಎಲ್ಲಿಂದ ಎಲ್ಲಿಗೆ ವಾದ ! ಇತ್ತ ನೋಡಿದರೆ, ನೇಪಾಳದ ಮಹಾರಾಜರು ಮಹಾರಾಣಿಯವರು ಬಂದರೆಂದು ಎಲ್ಲರೂ ನೆಹರೂ ಮೊದಲುಗೊಂಡು King and Queen of Nepal ಎಂದು ಓಡಾಡಿದ್ದೇ ಓಡಾಡಿದ್ದು! ಅತ್ತ His Majesty the King of the Saudi Arabiaಯವರು ಬಂದರೆಂದು ಹೇಳಿ ನಮ್ಮ ರಾಜಕಾರ್ಯವೆಲ್ಲಾ ತಟಸ್ಥವಾದುದನ್ನು ನೋಡುತ್ತಿದ್ದೇವೆ. ಅವರಿಗೆ ಮೆರವಣಿಗೆ. ಪ್ರಜಾ ಪ್ರಭುತ್ವದಲ್ಲಿ ಇಂಥದಕ್ಕೂ ಸ್ಥಾನವಿದೆಯೆಂಥಾಯಿತಲ್ಲವೆ ?

ಒಬ್ಬ ಸದಸ್ಯರು.—ಬುಲ್ಗಾನಿನ್‌ಗೆ ಮಾಡಲಿಲ್ಲವೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಬೇರೆ ದೇಶದವರ ವಿಚಾರದಲ್ಲಿ ಸರಿ. ಅದೇನೇ ಇರಲಿ, ಅಂತೂ ಅವರುಗಳ ವಿಷಯದಲ್ಲಿ ಆ ಸ್ಥಾನಕ್ಕೆ ಗೌರವ ಕೊಡುವುದಕ್ಕೆ ಸಿದ್ಧವಾಗಿರುವಾಗ ನಮ್ಮಲ್ಲೇಕೆ ಅಂಥ ಸ್ಥಾನವಿರಕೂಡದೆಂದು ಹೇಳುತ್ತೀರಿ? ಇಂಗ್ಲೆಂಡಿನಲ್ಲಿ ಎಷ್ಟು ವರ್ಷಗಳ ಹಿಂದೆ, ಮೊದಲನೆಯ ಚಾರ್ಲ್ಸ್‌ನ ತಲೆಯನ್ನೇ ಕತ್ತರಿಸಿಹಾಕಿ ಪ್ರಜಾ ಪ್ರಭುತ್ವವನ್ನು ಸ್ಥಾಪಿಸಿದರು ? ಅಂಥವರೂ ಇಂದಿಗೂ ಹೆಣ್ಣುಮಗಳೊಬ್ಬಳನ್ನು ರಾಣಿ, ರಾಣಿ, ಎಂದು ಹೇಳಿಕೊಂಡು ಮೆರೆಸುತ್ತಿಲ್ಲವೇ ? ಅವರದು ಪ್ರಜಾಪ್ರಭುತ್ವವಲ್ಲವೇ ? ಅಲ್ಲಿ ದೊರೆತನವಿಲ್ಲವೇ ?

ಒಬ್ಬ ಸದಸ್ಯರು.—ಅವರು ಹೆಸರಿಗೆ ಮಾತ್ರ Head of the State.

ಶ್ರೀ ಎಚ್. ಕೆ. ವೀರಣ್ಣಗೌಡ.—ಇಲ್ಲಿಯೂ ಅಷ್ಟೇ ರಾಜಪ್ರಮುಖ್ ಎಂದರೂ Head of the State ಎಂದರ್ಥ.

ಇವೊತ್ತಿನ ಇಂಡಿಯಾ ದೇಶದ ಸ್ಥಿತಿ ಹಿಂದೆ ಯಾವ ಕಾಲದಲ್ಲೇ ಆಗಲಿ ಇರಲಿಲ್ಲ. ಅಶೋಕ ಅಥವಾ ಮೊಗಲರ ಕಾಲದಲ್ಲಿ ಆಗಲಿ ಕನ್ಯಾಕುಮಾರಿಯಿಂದ ಹಿಡಿದು ಹಿಮಾಚಲದವರೆಗೆ ಒಂದೇ ಚಕ್ರಾಧಿಪತ್ಯಕ್ಕೆ ಒಳಪಟ್ಟಿರಲಿಲ್ಲ. ಅಂಥಾದ್ದು ಇಂದು ಮಹಾತ್ಮಾ ಗಾಂಧಿಯವರ ಕೃಪೆಯಿಂದಾಗಿ ನೆಹ್ರೂ ಅವರ ನೇತೃತ್ವದಲ್ಲಿರುವ ಕಾಂಗ್ರೆಸ್ಸಿನವರಾದ ನಾವು ಕನ್ಯಾ

ಕುಮಾರಿಯಿಂದ ಹಿಮಾಚಲದವರೆಗೆ ಏಕ ಚಕ್ರಾಧಿಪತ್ಯ ದಲ್ಲಿದ್ದೇವೆಂದು ಹೇಳಿಕೊಳ್ಳುವುದಕ್ಕೆ ಸಾಧ್ಯವಾಗಿದೆ.

ಒಬ್ಬ ಸದಸ್ಯರು.—ಹೇಳಿಕೊಳ್ಳುವುದಕ್ಕೆ ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೇಳಿಕೊಳ್ಳುವುದಿಲ್ಲ. It is a fact. ಅದು ಸತ್ಯ. ಇಡೀ ಇಂಡಿಯಾ ದೇಶವೆಲ್ಲಾ ಒಂದು ಆಡಳಿತಕ್ಕೊಳಪಟ್ಟಿದೆಯೆಂಬುದು ಇವೊತ್ತು ಮಾತ್ರ.

ಅದು ಬೇರೆ ವಿಷಯವಾಯಿತು. ಮೈಸೂರು ಕಾಂಗ್ರೆಸ್ಸಿನವರು ಮೊದಲಿನಿಂದಲೂ ಈ ತತ್ವವನ್ನು ಒಪ್ಪಿಕೊಂಡಿದ್ದಾರೆ ಎಂದು ಒಂದು ವಾದವನ್ನು ಕೆಲವು ಸ್ನೇಹಿತರು ಮುಂದಿಡುತ್ತಿದ್ದಾರೆ. ಎಲ್ಲಿ ಒಪ್ಪಿಕೊಂಡಿದ್ದಾರೆಂಬುದೇ ನನಗೆ ಗೊತ್ತಿಲ್ಲ. ಮೊದಲಿನಿಂದಲೂ ಭಿನ್ನಾಭಿಪ್ರಾಯವಿದ್ದೇ ಇದೆ. ಬೀರೂರಿನಲ್ಲಿ ನಡೆದ ಅಧಿವೇಶನದಲ್ಲಿಯೂ ಕೂಡ ಈ ವಿಷಯ ಬಂದಾಗ ಭಿನ್ನಾಭಿಪ್ರಾಯ ಬಂದು ಒಂದು ಕಮಿಟಿ ಏರ್ಪಾಡಾಯಿತು. ಆ ಕಮಿಟಿಯಲ್ಲಿದ್ದ ಆರು ಜನರಲ್ಲೂ ಮೂರು ಮಂದಿ 'ಬೇಕು' ಎಂದರು, ಮೂವರು 'ಬೇಡ' ಎಂದರು. ಮೂರು ಮಂದಿ ಈ ಕೂಡಲೇ ಕರ್ನಾಟಕ ಆಗಬೇಕು ಎಂದರು. ಮೂರು ಮಂದಿ 10-15 ವರ್ಷ ನಿಧಾನವಾಗಲಿ ಎಂದರು. ಕೊನೆಗಾದರೂ ಆ ಕಮಿಟಿಯವರ ವರದಿ ಮೈಸೂರು ಕಾಂಗ್ರೆಸ್ ಸಂಸ್ಥೆಯಲ್ಲಿ ಅಂಗೀಕಾರವಾಯಿತೇ? ಕಾಂಗ್ರೆಸ್ ಸಮಿತಿಯ ಮುಂದೆ ಬಂದು ಆ ಪ್ರಶ್ನೆ ತೀರ್ಮಾನವಾಯಿತೇ? ಇಲ್ಲ, ಹೀಗಿರುವಾಗ ಇಂಥ ಉದಾಹರಣೆಗಳನ್ನೇಕೆ ಹೇಳುತ್ತಾರೋ ಕಾಣೆ. ಆದ್ದರಿಂದ ಮೈಸೂರು ಕಾಂಗ್ರೆಸ್ಸಿನವರು ಏನೋ ಒಂದು ತೀರ್ಮಾನ ಮಾಡಿದ್ದರು, ಈಗ ಬದಲಾಯಿಸಿಕೊಂಡು ವಾದ ಮಾಡುವುದು ಸರಿಯಲ್ಲವೆಂದು ಹೇಳುವ ವಾದ ಸರಿಯಾದುದಲ್ಲ. ಒಂದು ವೇಳೆ ವಾದಕ್ಕಾಗಿ, ನಾವು ಒಪ್ಪಿಕೊಂಡಿದ್ದೆವೆಂದೇ ಇಟ್ಟುಕೊಂಡರೂ, ಈಚಿನ ಅನುಭವದಮೇಲೆ, ಮೊದಲು ಮಾಡಿದ್ದು ಸರಿಯಲ್ಲವೆಂದು ಹೇಳಿ ಅಭಿಪ್ರಾಯವನ್ನು ಬದಲಾಯಿಸಿಕೊಳ್ಳುವುದರಲ್ಲಿ ತಪ್ಪೇನೋ ನನಗೆ ಅರ್ಥವಾಗಿಲ್ಲ.

ಬಳ್ಳಾರಿಯನ್ನು ಸೇರಿಸಿಕೊಂಡರಲ್ಲ ಅದರಂತೆಯೇ ಇದನ್ನೂ ಏಕೆ ಸೇರಿಸಿಕೊಳ್ಳಬಾರದು ಎಂಬ ವಾದ ಬಂತು. ಬಳ್ಳಾರಿಯಾದರೋ ಒಂದು ಸಣ್ಣ ಜಿಲ್ಲೆ. ಜಿಲ್ಲೆಯೆಂದು ಕೂಡ ಅದನ್ನು ಹೇಳುವುದಕ್ಕಾಗುವುದಿಲ್ಲ. ಆ ಪ್ರದೇಶ ತಮಿಳರಿಗೂ ಬೇಕಾಗಿಲ್ಲದೆ, ಅತ್ತ ತೆಲುಗರಿಗೂ ಬೇಕಾಗಿರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಆ ಜಿಲ್ಲೆಯ ಜನರಿಗೆ ಆಂಧ್ರಕ್ಕಾಗಲಿ, ತಮಿಳು ನಾಡಿಗಾಗಲಿ ಸೇರುವ ಇಚ್ಛೆಯಿರಲಿಲ್ಲ. ಆ ಜನರು ಎತ್ತ ಕಡೆ ಹೋಗಬೇಕೆಂಬ ಯೋಚನೆಯಿತ್ತು. ಅಂಥ ಸಂದರ್ಭದಲ್ಲಿ ಆ ಜನರು ತಾವೂ ಕನ್ನಡ ಮಾತನಾಡುವವರು, ನಮ್ಮೊಡನೆ ಸೇರುತ್ತೇವೆ ಎಂದು ಅಪೇಕ್ಷೆಪಟ್ಟರು, ನಾವೂ ಅದಕ್ಕೆ ಒಪ್ಪಿದೆವು. ಅದರಮೇಲೆ ಅವರು ನಮ್ಮೊಡನೆ ಸೇರಿದರು. ಆದರೆ ಇವೊತ್ತಿನ ಪರಿಸ್ಥಿತಿ ಅದಲ್ಲ. ನಾವು ಆ ಕರ್ಣಾಟಕದವರನ್ನು ಬೇಡವೆಂದರೂ ಅವರು 'ಬಂದೇ ಬರುತ್ತೇವೆ, ನಿಮ್ಮ ಮನೆಯಲ್ಲೇ ಬಂದು ನಿಮ್ಮ ಹೆಗಲೇರಿ ನಿಮ್ಮನ್ನು ನಿರ್ನಾಮ ಮಾಡುತ್ತೇವೆ, ನಾಮಾವಶೇಷ ಮಾಡುತ್ತೇವೆ' ಎಂದು ಹೇಳುತ್ತಿದ್ದಾರೆ. ಮೈಸೂರಿನಲ್ಲಿ ಈಗಿರುವುದೇ ಆಗಲೇ ಒಂದು ಕೋಟಿ. ಅಲ್ಲಿಂದ ಬೇರೆ ಒಂದು ಕೋಟಿ ಬರುತ್ತಾರೆಂದರೆ, ಹೀಗೆ ಕೋಟಿ ಕೋಟಿ ಜನ ಬರುತ್ತಾರೆಂದರೆ ಅದನ್ನು ಹೇಗೆ ಒಪ್ಪುವುದು ? ನಮ್ಮ ದೇಶದಲ್ಲಿ ಮುಕ್ಕಾಲು ಭಾಗ ಜನ ಈ ಮಿಳನಕ್ಕೆ ವಿರೋಧವಾಗಿದ್ದಾರೆಂದು ನಾನು ಹೇಳಬಲ್ಲೆ. ಹೀಗಿರುವಾಗ ಸುಮ್ಮನೆ ನಮ್ಮನ್ನು ಬಾಯಿ ಕಟ್ಟಿ ಬಲೋದ್ಬಂದಿಯಿಂದ ಅವರನ್ನು ನಮ್ಮ ಮೇಲೆ ಹೇರುವುದು ಸರಿಯಲ್ಲ. ನಿನ್ನೆತಾನೆ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಏನಾಯಿತೆಂಬುದನ್ನು ನಾನಿಲ್ಲಿ ಹೇಳುವುದಕ್ಕೆ ಇಷ್ಟಪಡುವುದಿಲ್ಲ. 100 ಜನ ಬಂದಿದ್ದವರಲ್ಲಿ 52 ಜನ ವೋಟು ಮಾಡಿದರು. ಭಯವಿಲ್ಲದೆ, ನಿರ್ಭಯವಾಗಿ ವೋಟು ಮಾಡಲು ಅವಕಾಶವಿದ್ದಿದ್ದರೆ ಎಷ್ಟು ಜನ ವೋಟು ಮಾಡುತ್ತಿದ್ದರೆಂಬುದು ಗೊತ್ತು. 62 ಜನರಾದರೂ ಓಟು ಮಾಡುತ್ತಿದ್ದರು. ಆದ್ದರಿಂದ ಬಾಯಿಕಟ್ಟಿ ಹೀಗೆ ಮಾಡುವುದಕ್ಕೆ ಪ್ರಾಧಾನ್ಯತೆ ಕೊಡುವುದು ಸರಿಯಲ್ಲ. ದೇಶದಲ್ಲಿ ಅರ್ಧ ಕೋಟಿ ಜನ ಬೇಡವೆಂದು ಹೇಳುವಾಗ ಒಂದೂವರೆ ಕೋಟಿ ಜನ ಬೇಕೆನ್ನುತ್ತಿದ್ದಾರೆ ಎಂದು ವಾದ ಮಾಡುತ್ತಿರುವುದನ್ನು ನೋಡಿದರೆ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತದೆ. ಯಾರೋ ಒಬ್ಬ ಹುಚ್ಚು ಹುಡುಗ ತಾನು ಸರ್ದಾರನ ಮಗಳನ್ನು ಮದುವೆ ಮಾಡಿಕೊಳ್ಳುತ್ತೇನೆಂದು ಹೇಳಿದನಂತೆ. ಅದನ್ನು ಕೇಳಿದ ಮೇಲೆ, ಗಂಡು ಒಪ್ಪಿದನೆಂದು ಹೇಳಿ ಶೇಕಡ 50 ಭಾಗ ಮದುವೆಯಾಯಿತೆಂದು ವಾದ ಹುಟ್ಟಿತು. ಆಮೇಲೆ ಆ ಹುಡುಗನ ತಾಯಿಯೂ ಕೂಡ ಸರ್ದಾರನ ಮಗಳೇ ತನಗೆ ಸೊಸೆಯಾಗುತ್ತಾಳೆಂಬ ಸಂತೋಷದಿಂದ ಆಗಲಿ ಎಂದಳು. ತಾಯಿಯೂ ಒಪ್ಪಿದ ಮೇಲೆ ಶೇಕಡ 75 ರಷ್ಟು ಮದುವೆಯೇ ಆಯಿತೆಂದರು. ಆದರೆ ಲೌಕಿಕ ತಿಳಿದ ತಂದೆ ಇದಕ್ಕೆ ಒಪ್ಪಲಿಲ್ಲ. ಆದರೆ ಆ ಮದುವೆಗೆ ಶೇಕಡ 25 ರಷ್ಟು ಮಾತ್ರ ವಿರೋಧ ಎಂದು ಹೇಳಿದ ಹಾಗಾಯಿತು. ಏನು ವಾದ ! ನಾವೂ ಕೂಡ ಅದೇ ರೀತಿ ಮೈಸೂರಿಗೆ ಬರಬೇಕೆಂದು ಹೇಳುವವರ ವಾದಕ್ಕೆ ಪ್ರಾಮುಖ್ಯತೆಯನ್ನ ಕೊಡುತ್ತಿದ್ದೇವೆ. ಒಳ್ಳೆ ಮನೆಯನ್ನು ನೀವು ಕಟ್ಟಿದ್ದೀರಿ ಎಂದು ಹೇಳಿ ಇನ್ನು ಬೇರೆ ಮನೆಯನ್ನೇಕೆ ಕಟ್ಟಿಕೊಳ್ಳುವುದೆಂದು ವಾದ ಮಾಡುತ್ತಾ, "ನಿಮ್ಮ ಮನೆಗೇ ಬರುತ್ತೇವೆ, ನಿಮ್ಮ ಹೆಗಲ ಮೇಲೆಯೇ ಕುಳಿತುಕೊಳ್ಳುತ್ತೇವೆ" ಎನ್ನುವುದು ನ್ಯಾಯವೇ ? ಧರ್ಮವೇ ? ಆದ್ದರಿಂದ ನಾನವರನ್ನು ಕೈಮುಗಿದು ಕೇಳಿಕೊಳ್ಳುತ್ತೇನೆ, ನಾವು ಹೀಗೆ ಬೇಡವೆನ್ನುತ್ತಿರುವುದನ್ನಾದರೂ ಗಮನಿಸಿ ತಾವೇ ತಾವಾಗಿ "ನಾವು ನಿಮ್ಮೊಡನೆ ಬರುವುದಿಲ್ಲ, We don't come to join with you" ಎಂದಾದರೂ ಅವರಲ್ಲಿ ಶಕ್ತಿಯಿದ್ದವರು ಘೋಷಣೆ (declare) ಮಾಡಲಿ.

ಇನ್ನೊಂದು ವಿಷಯ, ಸ್ವಾಮಿ ಈ ವರದಿಯನ್ನು ತಯಾರು ಮಾಡಿರುವವರು ಯಾವ ರಾಜಕೀಯ ಪಂಗಡದವರಿಗೂ ಸೇರಿದವರಲ್ಲ. ಆದರೂ, ಅಂಥವರ ತಲೆಗೆ ಯಾರು ಜಾತಿಯ ವಾದವನ್ನು ತುಂಬಿದರೋ ಗೊತ್ತಿಲ್ಲ. ಅದನ್ನೇ ಇಲ್ಲಿ ಕೆಲವರು ದೊಡ್ಡದು ಮಾಡಿ ಮಾತನಾಡಿದ್ದಾರೆ. ಅದಕ್ಕಲ್ಲೂ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಅದೇ ವಾದವನ್ನು ಮುಂದುವರಿಸುತ್ತಾ, ಈ ಸಭೆಯಲ್ಲಿ ಕೋಮುವಾರು ಭಾವನೆ ಎದ್ದು ಕಾಣುತ್ತಿದೆಯೆಂದು ಹೇಳಿ, ಕೊನೆಯಲ್ಲಿ ಇದರಿಂದಾಗಿ ಹೊರಗಡೆ ತಾವು ತಲೆಯೆತ್ತುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಸ್ತ್ರೀಯರ ವಿಷಯದಲ್ಲಿ chivalrous ಮನೋಭಾವವುಳ್ಳವನಾದ ನಾನು ಅವರ ವಿಷಯದಲ್ಲಿ ಕಠಿಣವಾಗಿ ಮಾತನಾಡಿ ಅವರನ್ನು ಮುಖಭಂಗ ಮಾಡುವುದಕ್ಕಾಗಲಿ challenge ಮಾಡುವುದಕ್ಕಾಗಲಿ ಇಷ್ಟಪಡುವುದಿಲ್ಲ. ಅವರು ಹೇಳಿದಂತೆ ನಾಚಿಗೆಗೀಡಾದ ವಿಷಯವೇನಿಲ್ಲ. ಅವರೇಕೆ ಹಾಗೆ ಹೇಳಬೇಕೋ ಗೊತ್ತಿಲ್ಲ. ಲಿಂಗಾಯಿತರು ಪ್ರಬಲರಾಗುತ್ತಾರೆಂದು ನಮಗೆ ಭಯವೇ ? ಲಿಂಗಾಯಿತರು

(ಶ್ರೀ ಎಚ್. ಕೆ. ವೀರಣ್ಣಗೌಡ.)

ರಾಕ್ಷಸರೆಂದೇನಾದರೂ ನಾವು ತಿಳಿದುಕೊಂಡಿದ್ದೇವೆಯೇ? ಅಂಥ ಭಯವೇನೂ ನಮಗಿಲ್ಲ. ಏಕೆಂದರೆ— ಈ ಸಂದರ್ಭದಲ್ಲಿ ನನ್ನ ಸಂಸಾರಕ್ಕೆ ಸಂಬಂಧಪಟ್ಟ ಒಂದು ವಿಷಯವನ್ನೇ ಪ್ರಸ್ತಾಪ ಮಾಡಿದರೆ ಯಾರೂ ಅಪಾರ್ಥಮಾಡಿಕೊಳ್ಳಬಾರದು. ಸುಮಾರು 80-90 ವರ್ಷಗಳ ಹಿಂದೆ ನಮ್ಮ ಅಜ್ಜಿಯ ತಾತನ ಮನೆತನದವರನ್ನು ಯಾರೋ ಲಿಂಗವಂತರನ್ನಾಗಿ ಮಾಡಿದರಂತೆ. ದೊಡ್ಡ ಸಂಸಾರ ಅವರದು. 10-12 ಜನ ಸಹೋದರರನ್ನೊಳಗೊಂಡಿತ್ತು. ಅವರ ಮಕ್ಕಳು, ಮೊಮ್ಮಕ್ಕಳು ಎಲ್ಲ ಸೇರಿ ಅದೊಂದು ಭಾರಿ ಸಂಸಾರವಾಗಿತ್ತು. ಹೀಗಿರುವಲ್ಲಿ ಒಮ್ಮೆ ವೀರಕ್ಷಾಮ ತಲೆದೋರಿತು. ದೊಡ್ಡ ಸಂಸಾರದ ಅವರ ಹೆಂಗಸರು ಮಕ್ಕಳಿಗೇ ಸಾಕಷ್ಟು ಅನ್ನವಿಲ್ಲದೆ ಪೇಚಾಡುತ್ತಿದ್ದರು. ಹೀಗಿರುವಲ್ಲಿ ಒಂದು ದಿನ ಏರು ಕಟ್ಟಿಕೊಂಡು ಊರು ಮುಂದಣ ಕೆರೆಯ ಹತ್ತಿರ ಹೋಗುತ್ತಿದ್ದರು. ಕೆರೆಯಲ್ಲಿ ಮೀನು ಬೇಕಾದಷ್ಟಿತ್ತು. ಹೊಟ್ಟೆಗಿಲ್ಲದ ಅವರಲ್ಲಿ ಕೆಲವರು ಮೀನನ್ನು ನೋಡಿ, ಪ್ರಾಣವಿದ್ದರೆ ತಾನೆ 'ದೇವರು, ದಿಂಡರು' ಎಂದು ಹೇಳಿ, ಲಿಂಗ ಕಿತ್ತು ಕೆರೆಗೆ ಬಿಸಾಡಿ ಮೀನು ತಿಂದು ಬದುಕಿಕೊಂಡರು. ಹೀಗೆ ಜಾತಿ ಕೆಟ್ಟುಹೋದ ಅವರೊಡನೆ ಇರಲು ಇಷ್ಟವಿಲ್ಲದೆ ಅವರ ಪೈಕಿ ಇನ್ನು ಕೆಲವರು ಆ ಊರನ್ನು ಬಿಟ್ಟು ಬೇರೆ ದೇಶಕ್ಕೆ ಹೊರಟು ಹೋದರು. ಆ ಕಾಲದಲ್ಲಿ ಬೇರೆ ದೇಶವೆಂದರೆ ಮಳವಳ್ಳಿ ತಾಲ್ಲೂಕು ರಾಗಿಬೊಮ್ಮನಹಳ್ಳಿ! ಆದ್ದರಿಂದ ರಾಗಿಬೊಮ್ಮನಹಳ್ಳಿಯಿಂದ ಬಂದಿರುವ ಶ್ರೀ ನಾಗರಾಜ ಮೂರ್ತಿಯವರು ನನ್ನ ಅಣ್ಣ ತಮ್ಮಂದಿರು. ಅಥವಾ ಬಂಧು ಬಳಗಕ್ಕೆ ಸೇರಿದವರೇ. ಆ ಕಾಲದಲ್ಲಿ ಸ್ಥಳದಿಂದ ಸ್ಥಳಕ್ಕೆ ಓಡಾಟ ಕಡಮೆಯಾಗಿದ್ದುದರಿಂದ ಯಾವ ದೇಶಕ್ಕೆ ಹೋದರೆಂಬುದು ಗೊತ್ತಿಲ್ಲದೆ ಬೇರೆಯವರೆಂದು ಭಾವಿಸುವಂತಾಯಿತು ಅಷ್ಟೆ. ಅಲ್ಲಿಂದೀಚೆಗೆ ಬಹಳ ವರ್ಷಗಳಾದ ಮೇಲೆ ನಮ್ಮವರೊಮ್ಮೆ ಆ ಊರಿಗೆ ಹೋಗಿ ತಂಗಿದ್ದಾಗ ಅವರ ಮನೆಯವರು ನಮ್ಮ ಮನೆ ದೇವರ ಪದಗಳನ್ನು ಹೇಳಿಕೊಳ್ಳುತ್ತ ರಾಗಿ ಬೀಸುತ್ತಿದ್ದುದನ್ನು ಕೇಳಿ ಅವರು ಯಾರು ಏನು ಎಂದು ವಿಚಾರಿಸಿದಾಗ ಅವರೂ ತಾವೂ ಅಣ್ಣತಮ್ಮಂದಿರೆಂದು ಗೊತ್ತಾಗಿ ಅಪ್ಪಿಕೊಂಡು ಕಣ್ಣೀರ್ಗರೆದರು. ನಮ್ಮ ಮನೆತನದಿಂದ ಆ ಮೇಲೆ ಒಬ್ಬಿಬ್ಬರು ಹೆಣ್ಣು ಮಕ್ಕಳನ್ನೂ ಅವರು ತಂದುಕೊಂಡಿದ್ದರು. ಆದರೆ ಏನೋ ಜಿಹ್ವಾಚಾಪಲ್ಯದಿಂದ ಆ ಹೆಣ್ಣು ಮಕ್ಕಳು ತಮ್ಮ ತವರು ಮನೆಗೆ ಬಂದಿದ್ದಾಗ ಮಾಂಸಾಹಾರ ಮಾಡಿದರೆಂದು ತಿಳಿದು ಈಚೆಗೆ ಹೆಣ್ಣು ಕೊಟ್ಟು ತರುವುದು ನಿಂತುಹೋಗಿದೆ. ಅವರೂ ನಾವೂ ಒಂದೇ ಮನೆತನದವರು, ಅಣ್ಣತಮ್ಮಂದಿರೆಂಬುದನ್ನು ಮರೆಯುವಂತಿಲ್ಲ. ನಾನು ಹುಡುಗನಾಗಿದ್ದಾಗ ಈಗ ಸುಮಾರು 40-50 ವರ್ಷದ ಹಿಂದೆ ನಮ್ಮ ಅಜ್ಜಿಯಿಂದ ತಿಳಿದು ಬಂದ ಮಾತಿದು. ಆದ್ದರಿಂದ ಲಿಂಗಾಯಿತರೆಂದ ಮಾತ್ರಕ್ಕೇ ನಮಗೆ ಹೆದರಿಕೆ ಇಲ್ಲ. ಇದನ್ನೆಲ್ಲಾ ಏತಕ್ಕಾಗಿ ಹೇಳುತ್ತಿದ್ದೆನೆಂದರೆ ಲಿಂಗಾಯಿತರೇನೂ ಬ್ರಹ್ಮರಾಕ್ಷಸರಲ್ಲ; ನಾವು ಆ ರೀತಿಯೇನೂ ಅವರನ್ನು ಭಾವಿಸಿಲ್ಲ ಎನ್ನುವುದನ್ನು ಸೂಚಿಸಲು ಹೇಳಿದೆ. ಕೋಮುವಾರು ಭಾವನೆ ಖಂಡಿತ ನಮಗಿಲ್ಲ. ಮತ್ತೊಂದು ವಿಚಾರವನ್ನು ನಾನು ಹೇಳುವ ದಾದರೆ, ಈ ಒಕ್ಕಲಿಗರು ಸಾಮಾನ್ಯವಾಗಿ ನೆಲ ಉತ್ತುಕೊಂಡಿರತಕ್ಕಂಥ ಜನರಾಗಿದ್ದಾರೆ. ಸಮಯ ಬಂದರೆ ಇವರು ನೆಲವನ್ನೂ ಆಳುತ್ತಾರೆ. ಈ ದಿವಸ ನಾವು ಹಾಗೆ ನೆಲ ಉಳತಕ್ಕವರು ಅನ್ನುವುದನ್ನೂ ತೋರಿಸಿದ್ದೇವೆ; ನೆಲ ಆಳತಕ್ಕವರು ಎನ್ನುವ ದನ್ನೂ ತೋರಿಸಿದ್ದೇವೆ. ಆದಕಾರಣ ಈ ದಿವಸ ಬೇ ಯವರು ಈ ರಾಜ್ಯವ ಆಳಬಾರದು, ಹಾಗೊಂದು ವೇ ಅವರು ಆಳಿದರೆ ನಮಗೆಲ್ಲಾ ಅವರು ಶತ್ರುಗಳೆಂದ ನಾನು ಹೇಳಲಾರೆ. ಆದರೆ ಹೀಗೇನೋ ಅವರಿಂದ ಭರವಸೆಗಳನ್ನು ಬೇರೆ ತೆಗೆದುಕೊಂಡಿದ್ದಾರಂತೆ! ನೋಡೋಣ!

ಶ್ರೀ ಎಲ್. ಸಿದ್ದಪ್ಪ (ಚನ್ನಗಿರಿ).—ಅದು ಯಾರು ಯಾರಿಗೆ ಆಗಿರತಕ್ಕ ಒಪ್ಪಂದ!

ಶ್ರೀ ಎಚ್. ಕೆ. ವೀರಣ್ಣಗೌಡ.—ಯಾರು ಯಾರಿಗೆ ಹೇಳಿದ್ದಾರೋ ಆ ವಿಚಾರ ಹಾಗಿರಲಿ.

ಆದರೆ ಇಲ್ಲಿ ಕೆಲವು ಜನರು ಮಾಡುತ್ತಿರುವ ವಾದಗಳನ್ನು ನೋಡಿದರೆ—ಅವರು ನಮ್ಮ ಉದ್ದೇಶವೇನಿದೆ ಎನ್ನುವುದನ್ನು ಸರಿಯಾಗಿ ತಿಳಿದುಕೊಂಡು ಮಾತನಾಡುತ್ತಿರುವ ಹಾಗೆ ನನಗೆ ಕಂಡುಬರುತ್ತಿಲ್ಲ. ಕರ್ಣಾಟಕ ರಾಜ್ಯ ಹರಿದು ಹಂಚಿಹೋಗಿದೆ ಎಂದು ಕೆಲವರು ಹೇಳುತ್ತಿದ್ದಾರೆ. ಆ ಕರ್ಣಾಟಕ ರಾಜ್ಯ ವೆಲ್ಲಿತ್ತು? ಯಾವಾಗ ಅದು ಹಾಗೆ ಹರಿದು ಹಂಚಿ ಹೋಯಿತು? ಆಂಧ್ರದೇಶದಲ್ಲಿ ಯಾವತ್ತೂ ಕನ್ನಡ ಮಾತನಾಡತಕ್ಕ ಜನರು ಇದ್ದಾರೆ. ಹಾಗೆಯೇ ಕನ್ನಡ ಪ್ರಾಂತ್ಯದಲ್ಲಿ ತೆಲುಗು ಮಾತನಾಡುವ ಜನರೂ ಇದ್ದಾರೆ. ಆದಕಾರಣ ಇದು ಯಾವತ್ತೂ ಹರಿದೂ ಇಲ್ಲ; ಹಂಚಿಯೂ ಹೋಗಿಲ್ಲ. ಹಾಗೆ ಹೇಳುವುದಾದರೆ ಹಿಂದೆ ಟಿಪ್ಪೂಸುಲ್ತಾನನು ಮೈಸೂರು ರಾಜ್ಯವನ್ನು ಆ ಪಶ್ಚಿಮಘಟ್ಟವನ್ನೆಲ್ಲಾ ಜೈಸಿ ಅಲ್ಲಿಯವರೆಗೂ ಇದನ್ನು ವಿಸ್ತರಿಸಿದ್ದ. ಅಂದ ಮಾತ್ರಕ್ಕೇ ನಾವೀಗ ಆ ಪಶ್ಚಿಮಘಟ್ಟದ ಸರಹದ್ದನ್ನೆಲ್ಲಾ ತೆಗೆದುಕೊಳ್ಳುವುದಕ್ಕೆ ಆಗುತ್ತದೇನು? ಆದುದರಿಂದ ನಾವೀಗ ಕೇಳುತ್ತಿರುವುದು ನಮಗೆ ಆ ಹಳೆಯ ಮೈಸೂರು ರಾಜ್ಯವೇ ಬೇಕೆಂತಲೋ ಅಥವಾ ನಮಗೆ ಎಲ್ಲೆಲ್ಲಿ ಕನ್ನಡ ಮಾತನಾಡುವ ಜನರಿದ್ದಾರೋ ಆ ಪ್ರದೇಶವೆಲ್ಲವೂ ಬೇಕೆಂತಲೋ ?

Not an inch of the present Mysore should go to the outsider.

ಅಂದರೆ ಈಗಿರುವ ಮೈಸೂರು ಸಂಸ್ಥಾನದ ಒಂದು ಅಂಗುಲವನ್ನೂ ಹೊರಗಿನವರಿಗೆ ಬಿಟ್ಟು ಕೊಡಲು ನಾವು ಸಿದ್ಧರಾಗಿಲ್ಲ

ಎಂದು ಕೆಲವರು ಹೇಳುತ್ತಿದ್ದಾರೆ. ಹೀಗೆಂದರೆ ಆ ಹೊರಗಿನವರು ಯಾರು? ನಾವೆಲ್ಲರೂ ಒಂದೇ, ನಾವೆಲ್ಲರೂ ಭಾರತದ ಪ್ರಜೆಗಳು, ನಮ್ಮ ಇಂಡಿಯಾ ದೇಶದಲ್ಲಿರುವುದು ಏಕಚಕ್ರಾಧಿಪತ್ಯ ಎಂತಲೂ ಹೇಳುತ್ತಿದ್ದೇವೆ. ಹೀಗೆ ಹೇಳುತ್ತಿರುವಾಗಲೇ ಈಗಿನ ಮೈಸೂರಿನ ಒಂದು ಅಂಗುಲವೂ ಹೊರಗಿನವರಿಗೆ ಹೋಗ ಕೂಡದು, ಉದಾಹರಣೆಗೆ ಕೋಲಾರ ಜಿಲ್ಲೆ ಮೈಸೂರಿಂದ ಹೊರಗಿನವರಿಗೆ ಹೋಗ ಕೂಡದು, not an inch of the present Mysore should go to outsider for instance, Kolar should not go out of Mysore, should not go to the outsider.

ಹೀಗೆ ಅವರು ಹೊರಗಡೆಯವರು ಎಂದು ಹೇಳುವುದು ಯಾವ ನ್ಯಾಯ? ಕನ್ನಡಿಗರು ಮಾತ್ರವೇ ನಮ್ಮವರು ಅಂದರೆ ತೆಲಗರು ಹೊರಗಿನವರೇನು? ಹಾಗಿದ್ದರೆ ಈ S. R. C. ವರದಿಯನ್ನು ಭಾಷಾವಾರು ವರದಿ ಎಂದು ಏಕೆ ಕರೆಯಲಿಲ್ಲ? ರಾಜ್ಯಗಳ ಪುನರ್ವಿಂಗಡ

ಜೆಯ ವರದಿ ಎಂದೇ ಏಕೆ ಕರೆದಿದ್ದಾರೆ? ಹೀಗಿರುವಾಗ ಕೆಲವು ಕನ್ನಡ ಮಾತನಾಡತಕ್ಕ ಜನರು ಆಂಧ್ರದಲ್ಲಿದ್ದರೇನು? ಕೆಲವು ಆಂಧ್ರರು ಕನ್ನಡನಾಡಿನಲ್ಲಿದ್ದರೇನು? ಇಲ್ಲಿಯವರೆಗೂ ಈ ರೀತಿ ಇರಲಿಲ್ಲವೋ? ಈ ದಿವಸ ಹೀಗಾಗಬಾರದು ಎಂದು ಈ ಭಾಷವಾರು ತತ್ವದ ಮೇಲೆ ರಾಜ್ಯಗಳನ್ನು ವಿಂಗಡಿಸುವುದಕ್ಕೆ ಹೋದುದರಿಂದ ಸೊಲ್ಲಾಪುರ ಇತ್ಯಾದಿ ನಾನಾ ಕಡೆಗಳಲೆಲ್ಲಾ ದೊಡ್ಡ ದೊಡ್ಡ ಜಗಳಗಳು ನಡೆಯುತ್ತಿವೆ. ಕೇವಲ ಕನ್ನಡಿಗರು ಮಾತ್ರವೇ ನಮಗೆ ಅಣ್ಣ ತಮ್ಮಂದಿರಾದರೆ ಬಳ್ಳಾರಿಯಲ್ಲಿರುವ ಆಂಧ್ರರು ನಮಗೆ ಶತ್ರುಗಳೇನು? ಕನ್ನಡನಾಡಿನಲ್ಲಿ ಕನ್ನಡಿಗರು ಮಾತ್ರ ನಮ್ಮವರೆಂದು ಹೇಳಿದರೆ ಏನು ಅರ್ಥ ಇದು? "ಮಾಸೊಮ್ಮೊ ಮೊಸೊಮ್ಮೆ, ಮೊಸೊಮ್ಮೊ ಮಾಸೊಮ್ಮೆ" ಎಂಬ ಗಾದೆಯಂತೆ ಹೊರಗಿನ ಕನ್ನಡ ಮಾತಾಡುವ ಜನರಿರುವ ಪ್ರದೇಶ ನಮಗೆ ಬರಲಿ, ನಮ್ಮ ದೇಶದಲ್ಲಿರುವ ಬೇರೆ ಭಾಷೆ ಮಾತಾಡುವ ಜನರಿರುವ ಒಂದು ಇಂಚು ಜಾಗವನ್ನೂ ಸಹ ನಾವು ಬಿಟ್ಟು ಕೊಡುವುದಿಲ್ಲ ಎಂದು ಹೇಳತಕ್ಕವಾದ ಸರ್ವಥಾ ನ್ಯಾಯುವಾದುದಲ್ಲ. ಇದರಲ್ಲಿ ಹುರುಳಿಲ್ಲ.

ದೇಶ ಇನ್ನೂ ದೊಡ್ಡದಾದರೆ ಒಳ್ಳೆಯದು ಎಂದು ಬೇರೆ ವಾದ ಮಾಡಿದ್ದಾರೆ. ಹಾಗೆ ದೇಶ ದೊಡ್ಡದಾದಾಗ ಅದು ಒಳ್ಳೆಯದಾಗಿ ಆದರೂ ಆಗಬಹುದು; ಹಾಗೆ ಆಗದೆ ಇದ್ದರೂ ಇರಬಹದು. ಆದರೆ ದೇಶ ದೊಡ್ಡದಾದಷ್ಟೂ ಆಡಳಿತ ಬಿಗಿ ಕಡಿಮೆಯಾಗುತ್ತದೆ. ಆದಕ್ಕಾಗಿಯೇ ಈಗ ಒಂದು ಕೋಟಿ ಜನರಿರತಕ್ಕ ದೇಶವೇ ಸಮಗೆ ಸಾಕು. ನಮಗೆ ಬರತಕ್ಕ 15-20 ಕೋಟಿ ರೂಪಾಯಿಗಳ ಉತ್ಪತ್ತಿಯೇ ಸಾಕು. ಈ ಹೊತ್ತು ಮೈಸೂರು ಇಷ್ಟು ಅಭಿವೃದ್ಧಿಗೆ ಬಂದಿರುವುದು ಯಾವ ಬಂದರಿಂದಲೂ ಅಲ್ಲ. ಬಂದರ್ ಇಲ್ಲದೆಯೇ ದೇಶ ಇಷ್ಟು ಮುಂದಕ್ಕೆ ಬಂದಿದೆ. ಇಡೀ ಇಂಡಿಯಾದಲ್ಲೇ ಮೈಸೂರು ಮಾದರೀ ಸಂಸ್ಥಾನ ಎಂದು ಹೆಸರನ್ನು ಗಳಿಸಿದೆ; ಆದಕಾರಣ ಒಂದುಕೋಟಿ ಜನಸಂಖ್ಯೆ ಇರತಕ್ಕ ದೇಶವೇಇದ್ದರೆ ಒಳ್ಳೆಯದೆಂದು ಹೇಳುತ್ತೇನೆ ಹೀಗೆ ದೇಶ ಚಿಕ್ಕದಾಗಿದ್ದುದರಿಂದಲೇ ನಮ್ಮಲ್ಲಿ ಕನ್ನಂಬಾಡಿ ಅಂಥ ದೊಡ್ಡ ಕೆರೆಗಳೂ, ರಸ್ತೆಗಳೂ, ಆಸ್ಪತ್ರೆಗಳೂ, ಸ್ಕೂಲುಗಳೂ ಆಗಿ ದೇಶ ಅಭಿವೃದ್ಧಿಗೆ ಬರಲು ಅವಕಾಶವಾಗಿದೆ. ಹೀಗೆ ನಾವು ಈ ದಿವಸ ಪ್ರತಿಯೊಂದು ವಿಚಾರದಲ್ಲೂ ಮುಂದುವರಿದಿದ್ದೇವೆ. ಆದುದರಿಂದ ನನ್ನ ಒಂದು ಖಚಿತವಾದ ಅಭಿಪ್ರಾಯವೇನೆಂದರೆ—ಈಗ ನಮಗಿರತಕ್ಕ ಆದಾಯವೇ ನಮಗೆ ಸಾಕು; ಇದರಲ್ಲೇ ನಾವು ನಮ್ಮ ರಾಜ್ಯಾಡಳಿತವನ್ನು ಸುಖವಾಗಿ ನಡೆಸಿಕೊಂಡು ಹೋಗಬಹುದು. ಆದುದರಿಂದ ನಮಗಿರುವ ದೇಶ ಈಗಿರುವಷ್ಟೇ ಸಾಕು. ನಮ್ಮ ಸಂಖ್ಯೆಯಷ್ಟೇ ಈಗ ಹೊರಗಡೆಯವರೂ ಆಗುತ್ತಾರೆ. ಅವರೆಲ್ಲರೂ ಸೇರಿ ಒಂದಾಗಿ ಅವರ ಆಡಳಿತವನ್ನು ಅವರು ನಡೆಸಿಕೊಂಡು ಹೋಗಲಿ. ಇದರಲ್ಲಿ ಯಾರಿಗೂ ಬಾಧಕವಿಲ್ಲ. ಹಾಗಿಲ್ಲದೆ ಈ ಎರಡು ದೇಶಗಳೂ ಒಂದಾಗದೆ ಇದ್ದರೆ ನಾವು ಉಳಿಯುವುದೇ ಇಲ್ಲ ಎಂದು ಹೇಳುವುದು ಸಂತೆಯ ಜನರಿಗೆ ಹೇಳುವಂಥ ಮಾತು ಅದು. ದೇಶ ಚಿಕ್ಕದಾದರೆ ಕೇಂದ್ರ ಸರ್ಕಾರದವರು ಹೆಚ್ಚು ಸಹಾಯ ನೀಡಲು ಇಷ್ಟಪಡುವುದಿಲ್ಲ, ದೇಶ ದೊಡ್ಡದಾದರೇನೇ ಅವರು ಹೆಚ್ಚು ಸಹಾಯ ನೀಡುತ್ತಾರೆಂಬ ಇನ್ನೊಂದು ಅಂಶವನ್ನು ತಿಳಿಸಿದ್ದಾರೆ. ನಮಗೀಗ ದೇಶ ಚಿಕ್ಕದಾಗಿರುವುದರಿಂದ ಮೂರು ಕೋಟಿ ರೂಪಾಯಿಗಳ ಸಹಾಯ ಕೇಳುತ್ತಿದ್ದಾರೆ, ನಾಳೆ ದೇಶ ದೊಡ್ಡದಾದರೆ ಆರು ಕೋಟಿ ರೂಪಾಯಿಗಳ ಸಹಾಯ ಕೇಳುತ್ತೇವೆ; ಅಷ್ಟೇನೆ. ಇದರಲ್ಲಿ ಹೆಚ್ಚೇನು ಲಾಭ ಬಂದಹಾಗಾಯಿತು? ನಾವು ಇಲ್ಲಿಯವರೆಗೂ ನಮ್ಮ ಕಾಲಿನಮೇಲೆ ನಾವು ನಿಂತಿದ್ದೇವೆ; ದೇಶವನ್ನು ರೂಢಿಸಿದ್ದೇವೆ; ಖ್ಯಾತಿಯನ್ನು ಗಳಿಸಿದ್ದೇವೆ. ಕರ್ಣಾಟಕ ಏಕೀಕರಣ ಆಗದೇ ಇದ್ದರೆ ನಾವು ಯಾರೂ ಉಳಿಯುವುದೇ ಇಲ್ಲ; ಎಲ್ಲರೂ ಉಸಿರನ್ನು ಬಿಟ್ಟು ಸಾಯುತ್ತೇವೆಂದು ಹೇಳುವುದು ಸರಿಯಾದ ವಾದವಲ್ಲ. ಆದರೆ ನಮಗೀಗ ನಿಜವಾಗಿಯೂ ಉಂಟಾಗಿರತಕ್ಕಂಥ ಕಷ್ಟವೇನೆಂದರೆ—ಇದು ಜಾತಿ ಭೇದದ ಪ್ರಶ್ನೆಯೂ ಅಲ್ಲ, ಕೋಮುವಾರು ಭಾವನೆಯೂ ಅಲ್ಲ—ನಿಜವಾದ ಕಷ್ಟ ಯಾವುದೆಂದರೆ ಅದು ಆಡಳಿತ ಸೌಕರ್ಯದ ವಿಷಯ. ದೇಶ ದೊಡ್ಡದಾದರೆ ಆಡಳಿತದ ಬಿಗಿ ಸಡಿಲವಾಗುತ್ತದೆ. ಒಂದು ವೇಳೆ ಇಂಥ ದೊಡ್ಡ ರಾಜ್ಯಗಳು ಈ ದಿವಸ ಆದಾಗ್ಗೂ ಇವು ಕೇವಲ 10-15 ವರ್ಷಗಳು ಮಾತ್ರ ಇರಬಹುದು. ಆ ಮೇಲೆ ಇವುಗಳಾವುವೂ ಖಂಡಿತ ಇರುವುದಿಲ್ಲ. ಹೀಗೆ ದೇಶ ದೊಡ್ಡದಾದರೆ ಆಡಳಿತ ವೆಚ್ಚಕ್ಕೆ ಎಷ್ಟು ಹಣ ಖರ್ಚಾಗುತ್ತದೆ? ಪ್ರತಿಯೊಂದು ಜಿಲ್ಲೆಯ ಜಿಲ್ಲಾಧಿಕಾರಿಯೂ ಒಬ್ಬೊಬ್ಬ ನವಾಬರೇ ಆಗಿಬಿಡುತ್ತಾರೆ. ಆಗ ಜನರಪಾಡು ನಾಯಿಪಾಡಾಗುತ್ತದೆ. ಆದುದರಿಂದಲೇ ನಾವೀಗ ಇಂಥ ದೊಡ್ಡ ಪ್ರಾಂತ್ಯಗಳಿಗೂ, ದೊಡ್ಡ ಆಡಳಿತಕ್ಕೂ ಕೈ ಹಾಕಬಾರದೆಂದು ಹೇಳುತ್ತಿದ್ದೇನೆ. ಮೊನ್ನೆ ನಾನು ಡೆಲ್ಲಿಗೆ ಹೋಗಿದ್ದಾಗ್ಗೆ ಒಂದು ಮಾತು ನನ್ನ ಕಿವಿಗೆ ಬಿತ್ತು. ಉತ್ತರ ದೇಶ ಒಂದು ದೊಡ್ಡ ಸಂಸ್ಥಾನ. ಈಗ ಕೇಂದ್ರ ಸರ್ಕಾರದ ಮಂತ್ರಿಯಾಗಿರುವ ಶ್ರೀ ಪಂತ್‌ರವರು ಆ ಸಂಸ್ಥಾನದ ಮುಖ್ಯಮಂತ್ರಿಯಾಗಿದ್ದರು. ಅನೇಕವೇಳೆ ಅವರು ಜಿಲ್ಲಾಧಿಕಾರಿಗಳ ಪರಿಚಯವನ್ನು ಜ್ಞಾಪಕದಲ್ಲಿಟ್ಟುಕೊಳ್ಳಲಾಗದೆ, ಈ ಜಿಲ್ಲಾಧಿಕಾರಿಯ ಹೆಸರೇನು ಈ ಜಿಲ್ಲೆಯ ಹೆಸರೇನು ಎಂದು ಕೇಳುತ್ತಿದ್ದರಂತೆ. ಅಂದರೆ, ಅಲ್ಲಿ ಅವರ ಆಡಳಿತಕ್ಕೆ ಅಷ್ಟು ಹೆಚ್ಚಾಗಿ ದೇಶ ಒಳಪಟ್ಟಿದ್ದರಿಂದ ಅವರು ಹಾಗೆ ಕೇಳಬೇಕಾಯಿತು. ಈ ಹೊತ್ತು ಇಲ್ಲಿ ನಮ್ಮ ಇದೇ ಶ್ರೀ ಕೆ. ಹನುಮಂತಯ್ಯನವರು ನಮ್ಮಲ್ಲಿರುವ 8-10 ಜನ ಡೆಪ್ಯುಟಿ ಕಮಿಷನರನ್ನೂ, ಸಬ್ ಡಿವಿಜನ್ ಅಧಿಕಾರಿಗಳನ್ನೂ ಮತ್ತು ಹಲವು ಜನ ತಾಲ್ಲೂಕು ಅಮಲ್ದಾರರ ಹೆಸರುಗಳನ್ನೂ ಜ್ಞಾಪಕದಲ್ಲಿಟ್ಟುಕೊಂಡಿದ್ದಾರೆಂದು ತಿಳಿದಿದ್ದೇನೆ. ಇವರಿಗೆ ಇವರೆಲ್ಲರೂ ಗೊತ್ತಿದ್ದಾರೆ. ಕಾರಣವೇನೆಂದರೆ ಇಲ್ಲಿಯ ಆಡಳಿತ ಅಷ್ಟು ಚಿಕ್ಕದಾಗಿರುವುದೇ ಆಗಿದೆ. ಆದುದರಿಂದ ಯಾವ ಮಂತ್ರಿಗಳೇ ಆಗಲಿ ಅಷ್ಟೊಂದು ದೊಡ್ಡದಾದ ರಾಜ್ಯ ಮತ್ತು ಆಡಳಿತ ಕಟ್ಟಿಕೊಂಡು ಅದನ್ನು ವಿಚಕ್ಷಣೆಯಿಂದ ನಡೆಸಿಕೊಂಡು ಹೋಗಬೇಕೆಂದರೆ ಬಹಳ ಕಷ್ಟವಾಗುತ್ತದೆ. ಪ್ರಜಾಪ್ರಭುತ್ವದ ಆಡಳಿತದಲ್ಲಿ ಎಲ್ಲಾ ಪ್ರದೇಶಗಳಿಂದಲೂ ಮಂತ್ರಿಗಳು ಬರುತ್ತಾರೆ. Blood is thicker than water ನೀರಿಗಿಂತ ರಕ್ತ ಘನಿಯಾದುದು ಎಂಬ ಆಂಗ್ಲ ಗಾದೆಯೊಂದಿದೆ. ಅವರವರ ಜಿಲ್ಲೆಯ ಮೇಲೆ ಅವರಿಗೊಂದು ಜಾಸ್ತಿ ಅಭಿಮಾನವಿದ್ದೇ ಇರುತ್ತದೆ. ಇತ್ತೀಚೆಗೆ ಈ ನಮ್ಮ ಸೆಕ್ರೆಟೇರಿಯಟ್ಟಿನಲ್ಲಿ ಸಹ ಅಂಥ ಒಂದು ವದಂತಿ ಇರುವುದಾಗಿ ಕೇಳುತ್ತಿದ್ದೇನೆ. ನಮ್ಮ ಮಂತ್ರಿಮಂಡಲದಲ್ಲೂ ಅಂಥಾ ಒಬ್ಬ ಮಂತ್ರಿಗಳಿದ್ದಾರೆಂದೂ, ಅವರ ಮುಂದೆ ಯಾವ ಒಂದು ಫೈಲೇ ಬರಲಿ, ಅದ ಯಾವ ಸರ್ಕಾರಿ ವಿಷಯಕ್ಕೇ ಸಂಬಂಧಪಟ್ಟಿದ್ದಾಗಿರಲಿ ಅದರಲ್ಲಿ ತಮ್ಮ ಜಿಲ್ಲೆಯ ಹೆಸರೇನಾದರೂ ಇದೆಯೋ ಅಥವಾ ಇಲ್ಲವೇ ಅನ್ನುವುದನ್ನು ಮೊದಲು ನೋಡದೆ ಅವರು ಮುಂದಕ್ಕೆ ಹೋಗುವುದೇ ಇಲ್ಲವಂತೆ. ಆ

(ಶ್ರೀ ಎಚ್. ಕೆ. ವೀರಣ್ಣಗೌಡ.)

ರೀತಿ ನೋಡುವುದಕ್ಕೀಗ ಪ್ರಾರಂಭಿಸಿದ್ದಾರಂತೆ. ಉದಾಹರಣೆಗೆ ಈಗ ಶ್ರೀ ಎಚ್. ಕೆ. ವೀರಣ್ಣಗೌಡರಿಗೆ ಮೂರು ಎಕರೆ ಜಮೀನು ಕೊಡಬೇಕೆಂದು ಒಂದು ಫೈಲು ಅವರ ಮುಂದೆ ಹೋದರೆ ತಮ್ಮ ಜಿಲ್ಲೆಯ ಯಾರಿಗಾದರೂ ಒಬ್ಬರಿಗೆ ಜಮೀನು ಕೊಡುವುದಾಗಿದ್ದರೆ, ಈ ಮೂರು ಎಕರೆಗಳ ಸಂದರ್ಭ ಯಾವುದೇ ಆಗಿರಲಿ, ಅವರು ಫೈಲನ್ನು ನೋಡುತ್ತಾರಂತೆ.

ಶ್ರೀ ಎಸ್. ಗೋಪಾಲಗೌಡ.—ಆ ನೋಟೀಸ್ ಹೋಗಬೇಕೆಂತಲೇ ಈಗ ಇದನ್ನು ಮಾಡಬೇಕೆಂದು ಹೇಳುತ್ತೇನೆ.

Sri H. K. VEERANNA GOWDH.—Human nature cannot be changed overnight.

ಶ್ರೀ ಎಲ್. ಸಿದ್ದಪ್ಪ.—ಯಾವ ಯಾವ ಜಿಲ್ಲೆಯ ಎಂ. ಎಲ್. ಎ. ಗಳು?

ಶ್ರೀ ಎಚ್. ಕೆ. ವೀರಣ್ಣಗೌಡ.—ಆದಕಾರಣ ದೊಡ್ಡ ದೇಶದಲ್ಲಿ ಜನರ ಪಾಡು ನಾಯಿ ಪಾಡಾಗುತ್ತದೆ. ಡೆಮಾಕ್ರಸಿಯಲ್ಲಿ ಆಡಳಿತ ಹೇಗಿರುತ್ತದೆ ಎನ್ನುವುದರ ಬಗ್ಗೆ ನಾನು ಈ ಹಿಂದೆ ಆಗಲೇ ಎರಡು-ಮೂರು ಸಲ ಹೇಳಿದ್ದೇನೆ. ಪ್ರಜಾ ಪ್ರಭುತ್ವ ಎನ್ನುವುದು ಎಲ್ಲ ತರಹೆಯ ಕೇಡುಗಳಿಗೂ ಸಿದ್ಧೌಷಧವಲ್ಲ. ಈ ಅಭಿಪ್ರಾಯವನ್ನೇ ಅನೇಕ ಮಹಾ ಮಹಾ ಮೇಧಾವಿಗಳೂ ಸಹ ಹೇಳಿದ್ದಾರೆ. ಇದು ಕೇವಲ ನಾನೊಬ್ಬನೇ ಹೇಳತಕ್ಕಂಥ ಮಾತಲ್ಲ. ದೊಡ್ಡ ಆಡಳಿತವಿರುವ ಕಡೆ ಜನರಿಗೆ ಸೌಕರ್ಯ ಚೆನ್ನಾಗಿರುವುದಿಲ್ಲ, ಜನರ ಹಿತರಕ್ಷಣೆ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ನಾನು ಈ ದಿವಸ ಸಾರಿ ಸಾರಿ ಹೇಳುತ್ತೇನೆ. ಮಾನ್ಯ ಶ್ರೀ ವಿ. ವೆಂಕಟಪ್ಪನವರು ಅನೇಕ ಉದಾಹರಣೆಗಳನ್ನು ಕೊಟ್ಟು ಬಳ್ಳಾರಿ ಮೈಸೂರಿಗೆ ಸೇರಿದುದರಿಂದ ಆದ ಕಾನೂನು ಬದಲಾವಣೆಯಿಂದ ಇಲ್ಲಿನವರೆಗೆ ಆದ ಕಷ್ಟವೇನೆಂಬುದನ್ನು ತಿಳಿಸಿದ್ದಾರೆ. ನಾನು ಕೇವಲ ಈಗ ಒಂದೇ ಒಂದು ವಿಚಾರ ಮಾತ್ರ ಹೇಳಲಿಚ್ಛಿಸುತ್ತೇನೆ. ದೇಶಾದ್ಯಂತವೂ ಕಾನೂನುಗಳೆಲ್ಲಾ ಒಂದೇ ಆಗಿರಬೇಕಷ್ಟೆ. ಬೇರೆ ಬೇರೆ ಆಡಳಿತದಲ್ಲಿ ಪ್ರದೇಶಗಳು ಒಂದು ಆಡಳಿತಕ್ಕೆ ಬಂದರೆ ಕಾನೂನುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು ಅಗತ್ಯವಾಗುತ್ತದೆ. ಬಳ್ಳಾರಿ ಜಿಲ್ಲೆಯಲ್ಲಿ ಸ್ಟಾಂಪ್ ಫೀಜು ಇಲ್ಲಿಗಿಂತ ಹೆಚ್ಚಾಗಿತ್ತು. ಆ ಪ್ರಾಂತ ಮೈಸೂರಿಗೆ ಸೇರಿದ ಮೇಲೆ ಇಲ್ಲಿಯೂ ಜಾಸ್ತಿ ಮಾಡಿದರು. ಅದೇ ರೀತಿ ಬೇರೆ ಕಂದಾಯ ಕೌಳಿಗೆಗಳು ವ್ಯತ್ಯಾಸವನ್ನು ಸರಿಪಡಿಸುವ ನೆಪದಲ್ಲಿ ಜಾಸ್ತಿ ಭಾರ ಜನರಮೇಲೆ ಬೀಳುತ್ತದೆ. ಸರ್ಕಾರಕ್ಕೆ ಹಣ ಬೇಕಾದಾಗ ಈ ರೀತಿ ಆಗುತ್ತದೆ. ಈಗಲೇ ಹೆಚ್ಚಿನ ಕಂದಾಯದ ಹೊರೆಯನ್ನು ಹೇರಿರುವ ನಮ್ಮ ಜನರ ಕಷ್ಟ ನಿಷ್ಠೂರಗಳು ಹೇಗಿರುತ್ತವೆ ಎನ್ನುವುದನ್ನು ಬೇರೆ ಸಂದರ್ಭದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರೂ ಸರ್ಕಾರದವರು ಹೆಚ್ಚಿನ ತೆರಿಗೆಯನ್ನು ಹೇರಿರುತ್ತಾರೆ. ಆ ದಿವಸ ಸರ್ಕಾರಕ್ಕೆ ದುಡ್ಡು ಬೇಕಾದಾಗಲೆಲ್ಲ ಏನಾದರೂ ಮಾಡಿ ಹಣ ಎತ್ತಲೇಬೇಕೆಂಬ ಕಾರಣದಿಂದ . . . .

ಶ್ರೀ ಆರ್. ಅನಂತರಾಮ್.—ಆ ತೆರಿಗೆಯನ್ನು ತಗ್ಗಿಸುವುದಕ್ಕೆ ನಮಗೆ ಅಧಿಕಾರವಿಲ್ಲವೇ?

ಶ್ರೀ ಎಚ್. ಕೆ. ವೀರಣ್ಣಗೌಡ.—ಹೌದು. ಈಗ ನಾವು ಮಾಡಿರುವುದೂ ಅದೇ ಅಲ್ಲವೇ? ಈಗಲೂ ತಾವು ಮಾಡಿ, ತಮ್ಮಲ್ಲಿ ಆ ಅಧಿಕಾರ ಇದ್ದರೆ. ಆ ದಿವಸ ಸರ್ಕಾರಕ್ಕೆ ದುಡ್ಡು ಬೇಕಾಗಿತ್ತು; ಅದಕ್ಕಾಗಿ ಅವರು ರೈತನ ಬೆನ್ನು ಮುರಿದರೂ ಪರವಾಗಿಲ್ಲ ಎಂದು ಅದನ್ನು ಹಾಕಿಯೇ ಹಾಕಿದರು. ಕೆಲವು ವರ್ಷಗಳ ಹಿಂದೆ ಯಾರ ಕೈಲಿ ಮೂರು ಕಾಸು ಸಹ ಇರಲಿಲ್ಲವೋ ಅಂಥವರೆ ಈ ದಿವಸ ಹತ್ತಾರು ಲಕ್ಷ ರೂಪಾಯಿಗಳನ್ನು ಕೈಲಿ ಮಾಡಿಕೊಂಡಿದ್ದಾರೆ. ಆದರೆ ಅಂಥವರ ಮೇಲೆ ಯಾವ ತೆರಿಗೆಯೂ ಬಿದ್ದಿಲ್ಲ. ತಾವು ದೇಶ ದೊಡ್ಡದಾಗಲೇಬೇಕೆಂದು ಹೇಳುತ್ತಿರುವುದನ್ನು ನೋಡಿದರೆ ನಮ್ಮ ಈ ದಿವಸದ ಅಂತಸ್ತನ್ನು ಮುಂದೆ ಖಂಡಿತ ಇಳಿಸುತ್ತೀರಿ; ಪ್ರತಿಯೊಂದು ಜಿಲ್ಲೆಗೂ ಮುಂದೆ ಎಷ್ಟೆಷ್ಟು ಕಿರುಕುಳ ಜಾಸ್ತಿಯಾಗುತ್ತದೆ, ಜನರಮೇಲೆ ಇನ್ನೂ ಎಷ್ಟು ಭಾರ ಜಾಸ್ತಿ ಆಗುತ್ತದೆ ಅನ್ನುವುದನ್ನು ಈಗಾಗಲೇ ಅನೇಕರು ತಿಳಿಸಿದ್ದಾರೆ. ತಾವು ಹೇಳುತ್ತಿರುವುದು ಅಷ್ಟು ಸುಲಭವಾದುದಲ್ಲ. ಅದರಿಂದ ಬಹಳ ಕಷ್ಟವಿದೆ. ಈ ನಮ್ಮ ದೇಶವನ್ನು ನಮ್ಮ ಜನರೇ ಅಲ್ಲ, ಹಿಂದಿದ್ದ ನಮ್ಮ ಸರ್ಕಾರದವರೂ ಸಹ ಬಹಳ ಕಷ್ಟಪಟ್ಟು ಇದನ್ನು ಕಟ್ಟಿದ್ದಾರೆ; ಬರೀ ಕಂದಾಯದಾರರೇ ಅಲ್ಲ. ಈ ಬಗ್ಗೆ ಅಧಿಕಾರಿಗಳೂ ಸಹ ಹೆಚ್ಚಿಗೆ ದುಡಿದಿದ್ದಾರೆ. ಅಂಥ ಮೇಧಾವಿಗಳಾದ ಅಧಿಕಾರಿಗಳು ನಮ್ಮಲ್ಲಿದ್ದರು. ಅವರು ಹೊರಗಡೆಗೆ ಹೋದಾಗ ನಾವು ಅವರಿಗೆ ಕೊಡುತ್ತಿದ್ದಂಥಾ ಸಂಬಳ ಸಾರಿಗೆಗಿಂತಲೂ ಹೆಚ್ಚಾಗಿ ಕೊಟ್ಟಿದ್ದಾರೆ. ಮೂರು, ನಾಲ್ಕು ಮತ್ತು ಐದು ಸಾವಿರ ರೂಪಾಯಿಗಟ್ಟಲೆ ಹೊರಗಡೆ ಸಂಬಳ ಪಡೆಯತಕ್ಕಂಥ ಅಧಿಕಾರಿಗಳು ಇಲ್ಲಿದ್ದರು. ಕೋಟ್ಯಾಂತರ ರೂಪಾಯಿಗಳ ಸಾಲ ಮಾಡಿ ಈ ದೇಶವನ್ನು ಕಟ್ಟಿದ್ದಾರೆ. ಅದರ ಫಲವನ್ನು ಈ ದಿವಸ ಒಂದು ಕೋಟಿ ಜನರು ಅನುಭವಿಸಬೇಕೆಂದಿರುವುದನ್ನು ಇವರ ಜೊತೆಗೇ ನೀವೂ ಬನ್ನಿ ಎಂದು ಮತ್ತೊಂದು ಕೋಟಿ ಜನರನ್ನು ಕರೆಯುವುದು ಅಷ್ಟೇನೂ ಸುಲಭದ ಮಾತಲ್ಲ. "ಸಾವಿರ ಸಾರ್ತಿ ಬಾಯಲ್ಲಿ ಗೋವಿಂದ" ಎಂದು ಹೇಳಬಹುದು. ಅಷ್ಟೇ ಹೊರತು ಒಬ್ಬನಿಗೆ ಒಂದು ಹಿಡಿ ಭಿಕ್ಷ ಹಾಕಬೇಕಾಗಿದ್ದರೆ ಎಷ್ಟು ಕಷ್ಟವಿದೆ ಎನ್ನವುದು ಗೊತ್ತಾಗುತ್ತದೆ. ಹಿಂದೆ ಅಷ್ಟೊಂದು ಸಾಲ ಮಾಡಿದ್ದರ ಬಗ್ಗೆ ಎಷ್ಟು ಬಡ್ಡಿ ಕೊಟ್ಟಿದ್ದೇವೆ ಎನ್ನುವುದನ್ನು ನೋಡದೆ, ಆ ಕಷ್ಟವೇನೆಂಬುದನ್ನೇ ಅರಿಯದವರು ಈ ಹೊತ್ತು ಬಹಳ ಔದಾರ್ಯದಿಂದ ವರ್ತಿಸಬಹುದು. ಎಲ್ಲರನ್ನೂ ಬನ್ನಿ ಎಂದು ಕರೆಯಲೂ ಬಹುದು. ಆದರೆ ತಾವು ಕಷ್ಟಪಟ್ಟು ಸಂಪಾದನೆ ಮಾಡಿದ್ದರಲ್ಲವೇ ಆ ಯೋಚನೆ ಇರುವುದು?

ಸ್ವಾಮಿ, ಕೆಲವು ಸ್ನೇಹಿತರ ವಾದಗಳು ಬಹಳ ವಿಪರೀತವಾಗಿ ಮುಂದಕ್ಕೆ ಹೋಗುತ್ತಿವೆ. ಮನುಷ್ಯನಿಗೆ ಆಯಸ್ಸು ಇದ್ದಂತೆ ರಾಜ್ಯಕ್ಕೂ ಆಯಸ್ಸು ಇದೆ ಎಂದು ಒಬ್ಬರು ಹೇಳಿದರು. ಹಾಗಾದರೆ ಇಂಗ್ಲೆಂಡಿಗೆ ಎಷ್ಟು ವರ್ಷಗಳಿಂದ ಆಯಸ್ಸಿದೆ? ಅಮೇರಿಕಾಕ್ಕೆ ಎಷ್ಟು ವರ್ಷಗಳಿಂದ ಆಯಸ್ಸಿದೆ? ಇಂಡಿಯಾ ದೇಶಕ್ಕೆ ಎಷ್ಟು ವರ್ಷಗಳಿಂದ ಆಯಸ್ಸಿದೆ? ಈ ದೇಶಗಳೆಲ್ಲ ಆಯಾಯ ಹೆಸರುಗಳಿಂದಲೇ ತಲೆತಲಾಂತರದಿಂದ ನಡೆದು ಬರುತ್ತಿವೆ. ಒಂದು ದೇಶದ ಗಡಿ ಹೆಚ್ಚಬಹುದು ಅಥವಾ ಕಡಿಮೆಯಾಗಬಹುದು. ಆದರೆ ದೇಶದ ಹೆಸರೇ ನಾಶವಾಗುವುದಿಲ್ಲ. ಇದು ವಾದದ ರೂಪದಲ್ಲಿ ಈ ಸಭೆಯಲ್ಲಿ ಆಡತಕ್ಕ ಮಾತಲ್ಲ. ಆದ್ದರಿಂದ ಯಾವ ದೃಷ್ಟಿಯಿಂದಲೇ ನೋಡಲಿ, ಭಾಷಾವಾರು ದೃಷ್ಟಿಯಿಂದಾಗಲಿ, ಆರ್ಥಿಕ ವ್ಯವಸ್ಥೆಯ ದೃಷ್ಟಿಯಿಂದಾಗಲಿ, ಅಥವಾ ಆಡಳಿತ ಬಗೆಯಿಂದಾಗಲಿ ಜನಗಳಿಗೆ ಅನುಕೂಲ ಸೌಕರ್ಯಗಳನ್ನು ಕಲ್ಪಿಸಿಕೊಡುತ್ತೇವೆ ಎನ್ನುವ ದೃಷ್ಟಿಯಿಂದಾಗಲಿ, ಮೈಸೂರು ಈಗಿರುವಂತೆಯೇ ಉಳಿಯಬೇಕು, ಇವೆಲ್ಲಕ್ಕಿಂತ ಹೆಚ್ಚಿಗೆ ಉತ್ತರ ಕರ್ಣಾಟಕ ಪ್ರಾಂತಗಳನ್ನು ಏನು ಮಾಡಬೇಕೆನ್ನುವ ಪ್ರಶ್ನೆ

ಯನ್ನು ಕೆಲವರು ಎತ್ತಿದ್ದಾರೆ. ಪ್ರತಿಯೊಂದು ಅಂಶದಲ್ಲೂ ಅವರು ನಮ್ಮಂತೆ ಸಹಜವಾಗಿ ಅನುಕೂಲ ಸ್ಥಿತಿಯಲ್ಲಿರುವಾಗ, ನಮ್ಮ ಹಾಗೆ ಒಂದು ರಾಜ್ಯ ಕಟ್ಟಿಕೊಂಡು ಸುಖವಾಗಿ ಬಾಳಬಹುದಾಗಿದೆ. ನಮಗೆ ಬಂದರು ಇಲ್ಲ, ಅಲ್ಲಿ ಬಂದರುಗಳು ಇವೆ ಎಂದು ಹೇಳುತ್ತಾರೆ. ಹೈದರಾಬಾದ್‌ನಲ್ಲಿ ಯಾವ ಬಂದರು ಇದೆ? ಬಾಕೀ ಸಂಸ್ಥಾನಗಳಲ್ಲಿ ಯಾವ ಬಂದರು ಇದೆ? ಬಂದರಿಲ್ಲದೆ ಇರುವುದರಿಂದ ನಮಗೆ ಆದ ತೊಂದರೆ ಏನು? ಇದ್ದರೆ ಸಂತೋಷ. ಇಲ್ಲಿಯವರೆಗೆ ಯಾವ ಬಂದರೂ ಇಲ್ಲದೆ ನಿಭಾಯಿಸಿಕೊಂಡು ಒಂದು ರಾಜ್ಯ ಕಟ್ಟಿದ್ದೇವೆ ಎಂಬ ಹೆಸರನ್ನು ತೆಗೆದುಕೊಂಡಿದ್ದೇವೆ.

ಒಬ್ಬ ಸದಸ್ಯರು.—ಸಮುದ್ರದ ಮೀನು ತಿನ್ನಬಹುದು.

ಶ್ರೀ ಎಚ್. ಕೆ. ವೀರಣ್ಣಗೌಡ.—ಅದೂ ಆಗಬಹುದು. ನಮ್ಮ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ವೈಯಕ್ತಿಕವಾಗಿ ಹೇಳುತ್ತೇನೆ ಎಂದು ಹೇಳಿದರು. ಪ್ಲೆಬಿಸೈಟ್ ಏತಕ್ಕೆ ಬೇಡ? ಜನಾಭಿಪ್ರಾಯ ಏತಕ್ಕೆ ಬೇಡ? ನಾವೆಲ್ಲಾ ರಾಜೀನಾಮೆ ಕೊಡೋಣ. ಶ್ರೀ ಹನುಮಂತಯ್ಯನವರು ಅವರ ಕ್ಷೇತ್ರದಲ್ಲಿ ಮತ್ತು ನಾನು ನನ್ನ ಕ್ಷೇತ್ರದಲ್ಲಿ ಈ ವಿಷಯದ (issue) ಮೇಲೆ ಓಟು ತೆಗೆದುಕೊಳ್ಳೋಣ. ಅದು ಬೇಡದಿದ್ದರೆ ಇನ್ನೊಂದು ವರ್ಷ ಕಾಯಿರಿ. ಇಷ್ಟು ವರ್ಷಗಳಿಂದ ಇದ್ದುದು ಇವೊತ್ತು ಪ್ರಾಣ ಹೋಗುವುದೇನು? ಒಂದು ವರ್ಷ ಕಾಯಿರಿ. ಇದು ಒಂದು ಚುನಾವಣಾ ವಿಷಯ (election issue) ಆಗಲಿ. ನಾವೆಲ್ಲಾ ಚುನಾವಣೆಗೆ ನಿಂತುಕೊಳ್ಳುತ್ತೇವೆ. ಆಗ ಯಾರಯಾರ ಬಣ್ಣ ಹೇಗೆ ಇರುತ್ತದೆ ಎಂದು ಗೊತ್ತಾಗುತ್ತದೆ. ಇವೊತ್ತು ಮೈಸೂರನ್ನು ನಿರ್ನಾಮ ಮಾಡುವುದಕ್ಕೆ ಏತಕ್ಕೆ ಪ್ರಯತ್ನ ಮಾಡುತ್ತೀರಿ! ಹಾಗೆ ಪ್ರಯತ್ನ ಮಾಡಬೇಡಿ. ಈ ಸಭೆಯ ಮುಖಾಂತರ ಇಂಡಿಯಾ ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ: ನೀವು ನಮ್ಮ ಮೇಲೆ ಬಲವಂತದಿಂದ ಹೊರೆ ಹೇರಿಸಬೇಡಿ. ನಾನು ಇದನ್ನು ಸ್ವಾರ್ಥ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಇಲ್ಲಿಯವರ ಮಾತಿಗೆ ಮರುಳಾಗಬೇಡಿ. ಈ ಸಭೆ ತೀರ್ಮಾನ ಮಾಡುವುದು, M.P.C.C. ತೀರ್ಮಾನ ಮಾಡುವುದು ಬಹುಮತದ ತೀರ್ಮಾನವೆಂದು ಮರುಳಾಗಬೇಡಿ. ಅದು ಸುಳ್ಳು. ನಿಮ್ಮ ಆದೇಶವು ಬಾರದೇ ಇದ್ದಿದ್ದರೆ, ನಿಮ್ಮ ಒತ್ತಾಯವು ಬಾರದೇ ಇದ್ದರೆ ನಮ್ಮ ಅಭಿಪ್ರಾಯವೇ ಬೇರೆ ಆಗುತ್ತಿತ್ತು. ಬಹುಮತದ ಅಭಿಪ್ರಾಯ ಬೇರೆ ಆಗುತ್ತಿತ್ತು. ಇವತ್ತು ನಮ್ಮ ಬಾಯಿ ಕಟ್ಟಿದ್ದೀರಿ. ನಾನೂ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟುವುದಕ್ಕಾಗಿ ದುಡಿದಿದ್ದೇನೆ. ಇವೊತ್ತು ಕಾಂಗ್ರೆಸ್ ಸಂಸ್ಥೆಯ ನಾಯಕರಾಗಿರುವವರಲ್ಲಿ ಅನೇಕರು ಜಾತಿವಾರು, ಕೋಮುವಾರು ಸಂಸ್ಥೆಗಳಲ್ಲಿ ಕೆಲಸ ಮಾಡಿದವರು. ಆದರೆ ನಾನು 30 ವರ್ಷಗಳಿಂದಲೂ ಕಾಂಗ್ರೆಸ್ ಸಂಸ್ಥೆಗೆ ನಾಲ್ಕಾಣೆಯನ್ನು ಕೊಟ್ಟುಕೊಂಡು ನನ್ನ ಸದಸ್ಯತ್ವವನ್ನುಳಿಸಿಕೊಂಡು ಬಂದಿದ್ದೇನೆ. ನನಗೆ ಕೋಮುವಾರು ಸುಳಿವೇ ಇಲ್ಲ. M.P.C.C. ಯಲ್ಲಿ ಬಹುಮತ ಬಂದಿದೆ, Legislatureನಲ್ಲಿ ಬಹುಮತ ಬಂದಿದೆ ಎಂದು ಆ ರೀತಿ misguide (ತಪ್ಪು ದಾರಿಗೆಳೆಯುವುದು) ಮಾಡುವುದು ಅನ್ಯಾಯ ಮಾಡಿದ ಹಾಗಾಗುತ್ತದೆ. ಬಹುಮತ ಎಲ್ಲಿದೆ? ನಮ್ಮ ಬಾಯಿಕಟ್ಟಿ ಹೆದರಿಸಿ, ಬೆದರಿಸಿ, disciplinary action ತೆಗೆದುಕೊಳ್ಳುತ್ತೇವೆ ಎಂದು ಹೇಳಿ, ನೀನು ಕಟ್ಟಿದ ಸಂಸ್ಥೆಗೆ ನೀನೇ ವಿರೋಧ ಮಾಡುತ್ತೀಯಾ ಎಂದು ವಾದ ಮಾಡಿ, ನಮ್ಮನ್ನು ಸಮ್ಮನೆ ಕುಳ್ಳಿರಿಸಿ, ಬಹುಮತ ಇದೆಯೆಂದು ಹೇಳಿದ್ದರಿಂದ ಬಹುಮತ ಇದೆಯೋ'' ಎಂದು ಇಲ್ಲಿಂದ ಕೂಗಿ ಕೇಳುತ್ತೇನೆ. ಇದನ್ನು ದಪ್ಪ ಅಕ್ಷರದಲ್ಲಿ ಪ್ರಿಂಟ್ ಮಾಡಿಸಿ ಅವರ ಗಮನಕ್ಕೆ ತರಬೇಕು. ಏತಕ್ಕೆಂದರೆ ಈ resolution ಪಾಸ್ ಆಗುತ್ತದೆ. ಆದರೆ ನಾವು ವಿರೋಧವಾಗಿ ಓಟುಮಾಡುವುದಿಲ್ಲ. ಹಾಗೆ ಓಟು ಮಾಡಬೇಕಾಗಿದ್ದರೆ ಕಾಂಗ್ರೆಸ್ ಬಿಟ್ಟು ಹೋಗಬೇಕು. ಕಾಂಗ್ರೆಸ್ ಬಿಟ್ಟು ಹೋಗಬೇಕಾದರೆ ಸಂಕಟವಾಗುತ್ತದೆ. ಈ ಸಂಸ್ಥೆಗೆ ಬಹಳ ಕಷ್ಟಪಟ್ಟಿದ್ದೇನೆ. ನಾನು ಅಷ್ಟು ವಿದ್ಯಾವಂತನಲ್ಲ. ಶ್ರೀಮಂತನೂ ಅಲ್ಲ. ಸಾಮಾನ್ಯ ರೈತವರ್ಗದ ಮನೆತನದಲ್ಲಿ ಹುಟ್ಟಿ ಈ ಸಂಸ್ಥೆಗೆ ದುಡಿದವನು. ನನ್ನ ಸ್ವಂತ ಕೆಲಸ ಕಾರ್ಯವನ್ನೆಲ್ಲಾ ಬಿಟ್ಟು ನಾನು 30 ವರ್ಷಗಳ ಕಾಲ ಕಾಂಗ್ರೆಸ್ ಸಂಸ್ಥೆಯಲ್ಲಿ ದುಡಿದಿದ್ದೇನೆ. ಇವೊತ್ತು ನಾನು ಆ ಸಂಸ್ಥೆಯನ್ನು ಹೇಗೆ ಬಿಟ್ಟು ಹೋಗಲಿ? ಈ ಸಂಸ್ಥೆಯಲ್ಲಿರುವುದಕ್ಕೆ ನೀನು ಅರ್ಹನಾಗಿಲ್ಲ ಎಂದು ದೂಡಿಸಿಕೊಳ್ಳುವುದಕ್ಕೂ ನನಗೆ ಮನಸ್ಸಿಲ್ಲ. ಆದ್ದರಿಂದ ವ್ಯಥೆಯಾಗಿದೆ. ನಾನು ಸಂಸ್ಥೆಯಿಂದ ದೂಡಿಸಿಕೊಳ್ಳುವ ಅವಕಾಶ ಕೊಡಬೇಡಿ. ನಮಗೆ ಬಲವಂತ ಮಾಘಸ್ನಾನ ಮಾಡಿಸಿ, ನಿಮ್ಮ ಕಾರ್ಯವನ್ನು ಸಾಧಿಸಿದರೆ, ಮಾತೃದ್ರೋಹ ಮಾಡಿದಂತಾಗುತ್ತದೆ. ತಂದೆಯ ಮಾತು ಮೀರಬಾರದೆಂದು ಪರಶುರಾಮನು ತಾಯಿಯ ಕೊಲೆ ಮಾಡಲಿಲ್ಲವೇ ಎಂದರೆ, ತಾನೇ ಸರ್ವಜ್ಞನೆಂದು ಹೇಳಿದ ತಂದೆಯನ್ನು ಧಿಕ್ಕಾರ ಮಾಡಿ, ಹರಿಯು ಇದ್ದಾನೆ ಎಂದು ಹೇಳಿದ ಪ್ರಹ್ಲಾದನ ಆದರ್ಶವೂ ನಮ್ಮ ಮುಂದಿದೆ. ನಮಗೆ ಪೂಜ್ಯ ಗುರುಗಳಾಗಿರುವ ಗಾಂಧೀಜಿಯವರು ಹೇಳಿದ ಮಾತು ಎಂದರೆ ಯಾವ ಅನ್ಯಾಯ, ಅಧರ್ಮಗಳಿಗೂ ಅವಕಾಶ ಕೊಡಬಾರದು ಎಂದು ಹೇಳಿದ್ದನ್ನು ನಾವು ಮರೆಯುವುದು ನ್ಯಾಯವೇ, ಧರ್ಮವೇ!

ಕಾಂಗ್ರೆಸ್ ಅಧ್ಯಕ್ಷರು ಶ್ರೀ ಢೇಬರ್‌ರವರು ನಮ್ಮ ಸಂಸ್ಥಾನಕ್ಕೆ ದಯಮಾಡಿಸಿ, ಪ್ರವಾಸಮಾಡಿ, ನಮ್ಮಗಳೆಲ್ಲರೊಡನೆ ಚರ್ಚಿಸಿ ಇಲ್ಲಿಂದ ಹೊರಡುವಾಗ ಏನು ಅಪ್ಪಣೆಕೊಡಿಸಿದರು! ನಾನು ಡಿಲ್ಲಿಗೆ ಹೋಗಿ ನಿಮ್ಮ ಅಭಿಪ್ರಾಯ ಏನು ಎಂಬುದನ್ನು Working Committee colleaguesಗೆ ಹೇಳುತ್ತೇನೆ, ಆಮೇಲೆ ನಿಮಗೆ ಒಂದು ಸಲಹೆ ಕೊಡುತ್ತೇನೆ, ಆ ಸಲಹೆಯನ್ನು ಚರ್ಚೆಮಾಡಿ ಒಂದು ಒಮ್ಮತಾಭಿಪ್ರಾಯಕ್ಕೆ ಬನ್ನಿ, ಅಗತ್ಯವಿದ್ದರೆ ಆಮೇಲೆ ಇಬ್ಬರೂ ಸೇರಿ ಮಾತನಾಡೋಣ ಎಂದು ಅವರು ಹೇಳಿದ್ದರು. ನಮ್ಮ ಅಭಿಪ್ರಾಯವನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತರಬೇಕೆಂದು ನಾನು ದೆಹಲಿಗೆ ಹೋದಾಗ ನಾನು ಒಬ್ಬನೇ ಇರಲಿಲ್ಲ. ಶ್ರೀ ಎ. ಜಿ. ರಾಮಚಂದ್ರರಾಯರೂ, ಶ್ರೀ ಹುಚ್ಚಮಾಸ್ತಿಗೌಡರೂ, ಇನ್ನು ಇತರ 10-12 ಜನರೂ ಇದ್ದರು. ಆಗ ನಾವು ಶ್ರೀ ಢೇಬರ್‌ರವರನ್ನು ಕಂಡಾಗ ಅವರು "ಈಗ ನನ್ನ ಬಾಯಿ ಕಟ್ಟಿದೆ. ನಿಮ್ಮ M.P.C.C. ಅಧ್ಯಕ್ಷರೂ ನಾನೂ ಮಹಾ ಪ್ರಯತ್ನಪಟ್ಟಿದ್ದರ ಮೇಲೆ Working Committee ಯವರು ಈ ವಿಚಾರದಲ್ಲಿ ಯಾವ ತೀರ್ಮಾನವನ್ನೂ ತೆಗೆದುಕೊಳ್ಳಲಿಲ್ಲ. ನೀವು ಹಿಂದಿರುಗಿಹೋಗಿ ಒಂದು ತೀರ್ಮಾನಕ್ಕೆ ಬನ್ನಿ. ಆ ಮೇಲೆ ಬೇಕಾದರೆ ಮಾತಾಡೋಣ'' ಎಂದು ಹೇಳಿದರು. "I can discuss with you for any length of time when you come back after taking a decision in the M.P.C.C. and the Legislature" ಎಂದು ಹೇಳಿದರು. ಆಮೇಲೆ

(ಶ್ರೀ ಎಚ್. ಕೆ. ವೀರಣ್ಣಗೌಡ.)

ನಾನು ಶ್ರೀ ನೆಹರೂ ಸಾಹೇಬರನ್ನು ಕಂಡಾಗ "ತಮಗೆ ಬಹಳ ಕೆಲಸವಿದೆ. ತಮ್ಮ ಹತ್ತಿರ ಚರ್ಚೆ ಮಾಡುವುದಕ್ಕೆ ಬಂದಿಲ್ಲ. ತಾವು ನಮಗೆ ಕಾಲಾವಕಾಶ ಕೊಟ್ಟಿದ್ದಕ್ಕೋಸ್ಕರ ವಂದನೆ, ಕೃತಜ್ಞತೆಗಳನ್ನು ಸಲ್ಲಿಸುವುದಕ್ಕೋಸ್ಕರ ಬಂದಿದ್ದೇನೆ" ಎಂದು ಹೇಳಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ನಿರ್ಣಯದ 15ನೇ ಐಟಂನಲ್ಲಿ ಅದೇ ಸ್ಪೆಷಲ್ ಕಮಿಟಿಯು ಕರ್ಣಾಟಕ ಪ್ರಶ್ನೆಯನ್ನೂ ಇತ್ಯರ್ಥ ಮಾಡುತ್ತದೆ ಎಂದು ಹೇಳಿದ್ದಾರೆ. ಕರ್ಣಾಟಕ ವಿಚಾರದಲ್ಲಿ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ನಿಧಾನಮಾಡಿದ್ದು ಇಲ್ಲಿನವರ ಒಪ್ಪಿಗೆಗೆ ಬರಲಿ ಎಂದು. ಇಷ್ಟಾದ ಮೇಲೆ ಈಗ ನಮ್ಮ ಬಾಯಿಕಟ್ಟುವುದು ಧರ್ಮವೇ? ಗಾಂಧೀಜಿಯವರು ಹೇಳಿಕೊಟ್ಟ ಪಾಠ, ನೆಹರೂ ಹೇಳಿಕೊಟ್ಟ ಪಾಠ, ಕಾಂಗ್ರೆಸ್ ಹೈಕಮ್ಯಾಂಡ್ ಹಾಕಿಕೊಟ್ಟ ದಾರಿಯಂತೆ ನಡೆದು ಎದೆ ಚಾಚಿ ಹೇಳುವ ಧೈರ್ಯವನ್ನು ನಮಗೆ ದೇವರು ಕೊಡಬೇಕು. ಇವೊತ್ತು ನಮ್ಮ ಬಾಯಿ ಕಟ್ಟಿದ್ದಾರೆ. ಹೀಗೆ ಮಾಡುವುದರಿಂದ ಪ್ರಜಾಭಿಪ್ರಾಯಕ್ಕೆ ಮನ್ನಣೆ ಹೇಗೆ ಕೊಟ್ಟಂತಾಯಿತು? ನನ್ನ ಸ್ನೇಹಿತರೊಬ್ಬರು ಇಂಗ್ಲಿಷ್ ಭಾಷೆಯಲ್ಲಿ "Flexible" ಎಂದು ಹೇಳುತ್ತಾರೆ. ಆ ಪದಗಳ ಅರ್ಥ ಬದಲಾವಣೆಮಾಡಿ ಹೇಳಬಹುದು. ಆದರೆ ಅಕ್ಟೋಬರ್ 10ನೇ ತಾರೀಖಿನ ದಿನ ಈ ವರದಿ ಬಂದಾಗ—9ನೇ ತಾರೀಖು ಪಂಡಿತ ನೆಹರು ಅವರೂ ಪಂತರೂ "The public will have ample opportunities to discuss the report and then we can come to a decision" ಎಂದು ಹೇಳಿದರು. ಈಗ ಯಾರಿಗೆ ಆ ಸ್ವಾತಂತ್ರ್ಯವಿದೆ? "Parliament will decide the issue" ಎಂದು ಹೇಳುವಾಗ ಕಾಂಗ್ರೆಸ್ ಧೋರಣೆ ಏನು? ಕಾಂಗ್ರೆಸ್ ಸರಕಾರದ ಧೋರಣೆ ಏನು ಎಂಬುದನ್ನು ಮರೆಯಲಾಗದು. ಇದಕ್ಕೆ ಒಂದು ಬಿಲ್ಲು ಬರುತ್ತದೆ. ಆ ಬಿಲ್ಲಿನಲ್ಲಿ, ಸರ್ಕಾರದ ಧೋರಣೆ ಏನಿದೆ ಎಂಬುದನ್ನು ಊಹೆ ಮಾಡಬಹುದು. ಅದು ಎಲ್ಲಾ accomplished fact. ಕರ್ಣಾಟಕ ಏಕೀಕರಣ ಆಗಿಯೇ ಆಗುತ್ತದೆ. ನಮ್ಮ ಬಾಯಿ ಕಟ್ಟಿಸಿ, ಹೆದರಿಸಿ ಬೆದರಿಸಿ, ಭಯವುಂಟುಮಾಡಿ, ಇದನ್ನು ಸಾಧಿಸಬೇಕೆಂದು ಮಾಡುತ್ತಿದ್ದಾರೆ. ಆದರೆ ಮತ್ತೊಂದು ಸಾರಿ ಹೇಳುತ್ತೇನೆ. ಮೈಸೂರು ಸೇರಿದ ಕರ್ಣಾಟಕ ಏಕೀಕರಣ ಆದರೆ ಅದನ್ನು ಬಹಳಕಾಲ ಉಳಿಸಿಕೊಳ್ಳಲಾರರು; ಕರ್ಣಾಟಕ ಏಕೀಕರಣವಾದ ಮೇಲೆ, ಎರಡು ಸಂಸ್ಥಾನಗಳನ್ನು ಮಾಡುವುದಕ್ಕೆ ಪ್ರಯತ್ನ ನಡದೇ ನಡೆಯುತ್ತದೆ. ಕಡೆಯದಾಗಿ ಜನಗಳ ಮಾತಿಗೆ ಪ್ರಾಮುಖ್ಯತೆ ಕೊಟ್ಟೇ ಕೊಡಬೇಕಾಗುತ್ತದೆ. ಒಬ್ಬರು ತಪ್ಪುದಾರಿ ಹಿಡಿದರೆ ಅದನ್ನು ನಾವು ವಿಶಾಲದೃಷ್ಟಿಯಿಂದ ದೋಡಿ ಎಲ್ಲರನ್ನೂ ಪ್ರೇಮದ ಹೃದಯದಿಂದ ನೋಡಬೇಕು ಎಂದು ಹೇಳುತ್ತಾರೆ. ವಿಶಾಲದೃಷ್ಟಿ ಇರಬೇಕು ಎಂಬುದು ಹೊಡ್ಡ ದೊಡ್ಡ ಮಾತು, ದೊಡ್ಡ ದೊಡ್ಡ ಪದ, ದೊಡ್ಡ ದೊಡ್ಡ ಭಾವನೆ. ನಾವೆಲ್ಲಾ ಸ್ಕೂಲು ಮಕ್ಕಳಲ್ಲ. ನಮಗೆಲ್ಲರಿಗೂ ಅರ್ಥವಾಗುತ್ತದೆ. ವಾಸ್ತವಾಂಶಕ್ಕೆ ಗಮನಕೊಟ್ಟು ಈ ಪ್ರಶ್ನೆಯನ್ನು ಚರ್ಚೆ ಮಾಡಬೇಕು ಮತ್ತು ಯೋಚಿಸಬೇಕು. ನಾನು ಮಾತನಾಡುವುದಕ್ಕೆ ಇನ್ನೂ ಹೆಚ್ಚು ಕಾಲ ತೆಗೆದುಕೊಳ್ಳುವುದಿಲ್ಲ. ಈಗಾಗಲೇ ನನಗೆ ಬೇಕಾದಷ್ಟು ಅವಕಾಶ ಕೊಟ್ಟಿದ್ದೀರಿ. ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ನಿಮಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈ ಸಭೆಯ ಮುಖಾಂತರ ಕೇಂದ್ರ ಸರ್ಕಾರದವರಿಗೂ, ನ್ಯಾಷನಲ್ ಕಾಂಗ್ರೆಸ್‌ನವರಿಗೂ ನಾನು ಪ್ರಾರ್ಥನೆಮಾಡಿಕೊಳ್ಳುವುದು "ಬೇಡಿ, ನಮ್ಮ ಮೇಲೆ ಬಲವಂತದಿಂದ ಇದನ್ನು ಹೊರಿಸಬೇಡಿ. ಜನಗಳು ಧಿಕ್ಕಾರ ಮಾಡಬಹುದು" ಎಂದು. ಮೈಸೂರಿನ ಹೊರಗಡೆ ಇರುವ ಸ್ನೇಹಿತರನ್ನು ಪ್ರಾರ್ಥನೆಮಾಡಿಕೊಳ್ಳುವುದು "ನಮ್ಮ ಮೇಲೆ ಧಾಳಿ ಮಾಡಬೇಡಿ. ಹಾಗೆ ಧಾಳಿ ಮಾಡಿದರೆ ಅದನ್ನು ಎದುರಿಸಬೇಕಾಗುತ್ತದೆ" ಎಂದು. ಮೈಸೂರಿನ ಒಳಗಡೆ ಇರುವ ಸ್ನೇಹಿತರನ್ನು ಪ್ರಾರ್ಥನೆಮಾಡಿಕೊಳ್ಳುವುದು "ಮೈಸೂರು ಸೇರಿದ ಕರ್ಣಾಟಕ ಏಕೀಕರಣ ಬೇಡಿ, ತಾಯಿ ಕೊಲೆ ಮಾಡಬೇಡಿ" ಎಂದು. ಜೈ ಹಿಂದ್, ಜೈ ಮೈಸೂರು.

ಶ್ರೀ ಜೆ. ಮಹಮದ್ ಇಮಾಂ.—ಜೈ ಕರ್ಣಾಟಕ.

ಶ್ರೀ ಜಿ. ಎಸ್. ಬೊಮ್ಮೇಗೌಡ (ಮಂಡ್ಯ).—ಮಾನ್ಯಸಭಾಪತಿಗಳೇ, ನಮ್ಮ ಮುಂದಿರತಕ್ಕ S.R.C. ವರದಿಯಮೇಲೆ ಅನೇಕ ಸ್ನೇಹಿತರು ಮಾತನಾಡುವಾಗ ಅವರವರ ದೃಷ್ಟಿಕೋಣಕ್ಕೆ ಸರಿಯಾಗಿ ಯಾವ ವಿಷಯಗಳು ಆಪ್ಯಾಯಮಾನವಾಗಿವೆಯೋ ಅವನ್ನು ಆರಿಸಿ ಮಾತನಾಡಿದ್ದಾರೆ. ಎಂದಮೇಲೆ ನಾಣ್ಯದ ಎರಡು ಮುಖಗಳು ಇದ್ದಂತೆ ಈ ವರದಿ ಇದೆ ಎಂದು ಹೇಳಿದರೆ ತಪ್ಪಾಗಲಾರದು. ಆದರೂ ಈ ಸಭೆಯಲ್ಲಿ ಇದುವರೆಗೂ ಮಾತನಾಡಿದ ನನ್ನ ಎಲ್ಲಾ ಸ್ನೇಹಿತರೂ ಕೂಡ ಒಂದಲ್ಲ ಒಂದು ವಿಧದಲ್ಲಿ ಈ ವರದಿಯನ್ನು ವಿರೋಧಿಸಿದ್ದಾರೆ. ಯಾರಾದರೂ ವಿರೋಧಿಸಿಲ್ಲ ಎನ್ನುವವರು ಇದ್ದರೆ, ದಯಮಾಡಿ ತಿಳಿಸಬೇಕೆಂದು ಪ್ರಾರ್ಥನೆಮಾಡಿಕೊಳ್ಳುತ್ತೇನೆ. ಇದುವರೆಗೆ ಮಾತನಾಡಿದವರು ಒಂದಲ್ಲ ಒಂದು ವಿಧದಲ್ಲಿ ವರದಿ ಸರಿಯಾಗಿಲ್ಲ ಎಂದು ವಿರೋಧಿಸಿದ್ದಾರೆ. ಸಂಪೂರ್ಣವಾಗಿ ವರದಿಯಲ್ಲಿರತಕ್ಕ ಎಲ್ಲಾ ಅಂಶಗಳನ್ನೂ ನಾವು ಸ್ವಾಗತಿಸಿದ್ದೇವೆ ಎಂದು ಯಾರೂ ಕೂಡ ಹೇಳಲಿಲ್ಲ. ಈ ವರದಿ ವಿಷಯವಾಗಿ ಚರ್ಚೆಮಾಡುವಾಗ ಮುಖ್ಯಮಂತ್ರಿಗಳು ನಾನು ವೈಯಕ್ತಿಕವಾಗಿ ತಿಳಿಸುತ್ತಿದ್ದೇನೆ ಎಂದು ಹೇಳಿದರು; ಮತ್ತು ಇದು ಮಹತ್ವದ ದಿನ, ಇದನ್ನು ಬಹಳ ಜವಾಬ್ದಾರಿಯುತವಾಗಿ ಮತ್ತು ಬಹಳ ದೂರದರ್ಶಿತ್ವದಿಂದ ವಿಚಾರ ಮಾಡಿ, ತಮ್ಮ ಅಭಿಪ್ರಾಯ ಹೇಳಬೇಕು ಎಂದು ತಿಳಿಸಿದರು. ಅದಕ್ಕೆ ಸಾಕ್ಷಿ ಇಷ್ಟೇಸಾಕು. ಲಕ್ಷಗಟ್ಟಲೆ ಜನಗಳಿಂದ ಆರಿಸಿಬಂದ ನಾವು ಈ ದಿವಸ ಪೋಲೀಸ್ ಸಿಬ್ಬಂದಿಯಲ್ಲಿ ಗುರುತಿನ ಚೀಟಿಯನ್ನು ತೆಗೆದುಕೊಂಡು ಈ ಸಭೆಗೆ ಬಂದು ನಮ್ಮ ಜನತೆಯ ಅಭಿಪ್ರಾಯ ಕೊಡುವಂತೆ ಒಂದು ವ್ಯವಸ್ಥೆಯಲ್ಲಿ ಇದ್ದೇವೆ ಎನ್ನುವುದು ಎಲ್ಲರಿಗೂ ಚೆನ್ನಾಗಿ ಕಾಣುತ್ತದೆ. ಅಷ್ಟು ಮಾತ್ರವೇ ಅಲ್ಲ. ಎಲ್ಲರಿಗೂ ಕಣ್ಣಿಗೆ ಬಟ್ಟೆಕಟ್ಟಿ ಹೇಳಬೇಕಾಗಿಲ್ಲ. ಎಲ್ಲರಿಗೂ ಕಾಣತಕ್ಕದ್ದು. ಯಾರು ದೇಶದ ನಾಯಕತ್ವವನ್ನು ವಹಿಸಿಕೊಂಡು ನಡೆಸುತ್ತಿದ್ದಾರೋ ಅವರು ಹಿಂದೆಮುಂದೆ ಪೋಲೀಸ್ ಕಾವಲು ಇಟ್ಟುಕೊಂಡು ಹೋಗುವ ವ್ಯವಸ್ಥೆ ಈ ದಿವಸ ನಡೆಯುತ್ತಿದೆ. ಎಂದಮೇಲೆ ಎಷ್ಟರಮಟ್ಟಿಗೆ ದೇಶದ ಜನಗಳ ಅಭಿಪ್ರಾಯವನ್ನು ಪಡೆದಿದೆ, ಮನ್ನಣೆಯನ್ನು ಪಡೆದಿದೆ ಎನ್ನುವುದಕ್ಕೆ ಇದೇ ಸಾಕ್ಷೀಭೂತವಾಗಿದೆ. ಇಂತಹ ಒಂದು ಮಹತ್ವದ ವಿಷಯವನ್ನು ಚರ್ಚೆಮಾಡತಕ್ಕ ಕಾಲದಲ್ಲಿ 300-400 ವರ್ಷಗಳಿಗೊಮ್ಮೆ ಈ ರೀತಿ ಆಗುತ್ತದೆ ಎಂದು ಅವರು ಹೇಳಿದರು. 300-400 ವರ್ಷಗಳ ಹಿಂದೆ ಪ್ರಜಾಪ್ರಭುತ್ವ ಯಾವಾಗಲೂ ಇರಲಿಲ್ಲ.

ಪ್ರಜಾಪ್ರಭುತ್ವ ಬಂದಿರತಕ್ಕ ಕಾಲದಲ್ಲಿ, ಇಂತಹ ಒಂದು ಗಾಢವಾದ ಮತ್ತು ಒಂದು ಮಹತ್ವದ ವಿಷಯುವನ್ನು ಚರ್ಚೆಮಾಡಬೇಕಾದರೆ ನಾಯಕರಾಗಿರುವವರು, ದೇಶದ ಆಡಳಿತವನ್ನು ವಹಿಸಿರುವವರು, ಇಂತಹ ಮಹತ್ವ ವಿಷಯುವನ್ನು ದೇಶದ ಮುಂದೆ ಇಡುವಾಗ, ತಮ್ಮ ವೈಯುಕ್ತಿಕ ಅಭಿಪ್ರಾಯವನ್ನು ದೇಶದಮುಂದೆ ಇಡುವುದಕ್ಕೆ ಬದಲು, ಈ ದೇಶದ ಅಭಿಪ್ರಾಯವೇ ನನ್ನ ಅಭಿಪ್ರಾಯ ಎಂದು ಹೇಳಿದ್ದರೆ ಬಹಳ ಚೆನ್ನಾಗಿತ್ತು. ಒಂದು ವಿಚಾರವನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಯಾವ ದೇಶವನ್ನು ಕಟ್ಟುವುದರಲ್ಲಾಗಲಿ, ಬೆಳೆಸುವುದರಲ್ಲಾಗಲಿ, ಯಾವ ಜನರ ಬೆಂಬಲ ಮತ್ತು ಆಶ್ರಯವನ್ನು ಪಡೆದು, ಅವರ ಹೋರಾಟದ ಫಲವಾಗಿ ರಾಜ್ಯವನ್ನು ಕಟ್ಟುತ್ತೇವೋ ಆ ಜನರನ್ನು ನಾವು ಅಧಿಕಾರಕ್ಕೆ ಬಂದಮೇಲೆ ಅಥವಾ ಆಡಳಿತವನ್ನು ವಹಿಸಿಕೊಂಡಮೇಲೆ ನಿರ್ಲಕ್ಷ್ಯಮಾಡಿದರೆ, ಆ ರಾಜ್ಯ ಮತ್ತು ಆ ಆಡಳಿತ ಅಳಿಯುವುದಕ್ಕೆ ಕಾರಣವಾಗುತ್ತದೆ. ಇಂದು ಒಂದು ವಿಚಾರವನ್ನು ನಾನು ಘಂಟಾಘೋಷವಾಗಿ ಹೇಳುವುದಾದರೆ, ಈ ಕರ್ಣಾಟಕದ ವಿಷಯಕ್ಕೆ ಬಹುಮತಾಭಿಪ್ರಾಯ ಬರುವುದಿಲ್ಲ. ಇದು ಖಚಿತವಾದ ಅಭಿಪ್ರಾಯ. ನಾನು ಯಾವ ಜನತೆಯಿಂದ ಆರಿಸಿ ಬಂದಿದ್ದೇನೋ ಆ ಜನತೆಯ ಅಭಿಪ್ರಾಯವೇ ನನ್ನ ಅಭಿಪ್ರಾಯ. ಈ ಪ್ರಶ್ನೆಯ ಮೇಲೆ ನಾನು ನನ್ನ ಸ್ಥಾನಕ್ಕೆ ರಾಜೀನಾಮೆ ಕೊಡುವುದಾದರೆ, ಯಾರು ಅಲ್ಲಿನಿಂತು ಜಯಿಸುತ್ತೇನೆಂದು ಮುಂದೆ ಬಂದರೂ ನಾನು ಜಯಗಳಿಸಲು ಸಿದ್ಧವಾಗಿದ್ದೇನೆ. ಈ ದಿನ ಆಡಳಿತಾಧಿಕಾರ ವಹಿಸಿಕೊಂಡಿರುವವರು ಈ ಸಭೆಯಲ್ಲಿ ಇಂಥ ಮಹತ್ವ ವಿಷಯುವನ್ನು ಚರ್ಚೆಮಾಡುವಾಗ ಕಹಿ ವಾತಾವರಣವನ್ನುಂಟು ಮಾಡುವುದಕ್ಕೆ ಅವಕಾಶ ಕೊಡದೆ ಮಾಡಬಹುದಾಗಿತ್ತು. ಉದಾರ ಭಾವನೆಯಿರಬೇಕೆಂದಿರುವ ಈ ಸಭೆಯಲ್ಲಿ ಈ ವಿಷಯುವನ್ನು ಯೋಚನೆ ಮಾಡುವಾಗ ಕಹಿ ವಾತಾವರಣವನ್ನುಂಟುಮಾಡಲು ಅವಕಾಶ ಮಾಡಬಾರದಾಗಿತ್ತು. ಇಂಥ ವಾತಾವರಣವನ್ನು ಯಾರು ತಂದರು ಎಂದು ನಾನು ಹೇಳುವುದಾದರೆ,— ನಾನು ಯಾರಮೇಲೂ ವೈಯಕ್ತಿಕ ದ್ವೇಷದಿಂದ ಹೇಳುತ್ತಿದ್ದೇನೆಂದು ಭಾವಿಸಬಾರದು—ಹಿಂದೆ ನಾಯಕರ ಮೇಲೆ ಅವಿಶ್ವಾಸ ನಿರ್ಣಯ ಬಂದಿದ್ದ ಕಾಲದಲ್ಲಿ, ಮೈಸೂರು ಮೈಸೂರಾಗಿಯೇ ಉಳಿಯಬೇಕೆ ಅಥವಾ ಕರ್ಣಾಟಕದೊಡನೆ ಸೇರಬೇಕೆ ಎಂಬ ವಿಷಯದಲ್ಲಿ ನಿಮ್ಮ ಖಚಿತಾಭಿಪ್ರಾಯವೇನೆಂದು ನಾವು ಕೇಳಿದಾಗ, ಅವರು ಏನು ಹೇಳಿದರೆಂಬುದನ್ನು ಈಗ ಸಭೆಯ ಮುಂದೆ ತಿಳಿಸುತ್ತೇನೆ. ಇಲ್ಲವೆಂದು ಹೇಳುವುದಾದರೆ, ನಾನು ಆತ್ಮಸಾಕ್ಷಿಯಾಗಿ ಹಾಗೆ ಹೇಳಲಿಲ್ಲವೆಂದು ಹೇಳಲಿ. ಜನರಲ್ಲಿರತಕ್ಕ ಕೋಮುವಾರು ಭಾವನೆಯು ಅಳಿಯುವುದಕ್ಕವಕಾಶವಾಗಲೆಂದು ಹೇಳುತ್ತಿದ್ದೇನೆ. ಆಗಲೇ ಅವರು ನಮ್ಮಲ್ಲಿ ಸ್ಪಷ್ಟವಾಗಿ ತಮ್ಮ ಮನಸ್ಸಿನಲ್ಲಿದ್ದುದನ್ನು ಹೇಳಿದ್ದಿದ್ದರೆ ಇಷ್ಟೆಲ್ಲಾ ಚರ್ಚೆಗೆ ಅವಕಾಶವೇ ಆಗುತ್ತಿರಲಿಲ್ಲ. ಆದರೆ ಹಾಗೆ ಮಾಡದೆ, "ಅನೇಕ ಲಿಂಗಾಯಿತ ಸದಸ್ಯರಿದ್ದಾರೆ, ಅವರೆಲ್ಲರಿಗೂ ಕರ್ಣಾಟಕ ಏಕೀಕರಣ ಬೇಕು, ನಾನೂ ಅವರಿಗೆ ತಕ್ಕಂತೆ ಸ್ಟೇಟ್‌ಮೆಂಟ್ ಕೊಡದೇಯಿದ್ದರೆ ನನಗೆ ಅವರ ಬೆಂಬಲ ಸಿಕ್ಕುವುದಿಲ್ಲ, ಶೇಷಾದ್ರಿ ಸಮಿತಿಯನ್ನು ನೇಮಕ ಮಾಡಿದ್ದೇವೆ, ಅವರು ಮಾಡುವ ವರದಿಯಲ್ಲಿ ಇದಕ್ಕೆ ವ್ಯತಿರಿಕ್ತವಾದ ಅಭಿಪ್ರಾಯ ಬಂದೇ ಬರುತ್ತದೆ, ಅದಕ್ಕೇ ಈಗ ನಾನು ಈ ರೀತಿ ಸ್ಟೇಟ್‌ಮೆಂಟ್ ಕೊಟ್ಟಿದ್ದೇನೆ, ಮುಂದೆ ಸರಿಪಡಿಸಿಕೊಳ್ಳೋಣ" ಎಂದು ಹೇಳಿದರು. ದೇಶದ ಆಡಳಿತ ಜವಾಬ್ದಾರಿಯನ್ನು ವಹಿಸಿಕೊಂಡಿರುವವರಲ್ಲಿ ಈ ರೀತಿ ಅಂತರಂಗದಲ್ಲೊಂದು, ಬಹಿರಂಗದಲ್ಲೊಂದು ರೀತಿ ಇರಬಹುದೆ? ನಾಯಕರಲ್ಲಿ ಸ್ಥೈರ್ಯ, ಸದ್ಭಾವನೆ, ಸ್ಫೂರ್ತಿಪರತೆ ಇಂಥ ಸದ್ಗುಣಗಳಿಲ್ಲದಿದ್ದರೆ ಅದೇ ನಮ್ಮ ಅಧಃಪತನಕ್ಕೆ ಕಾರಣ, ಅದೇ ನಮ್ಮ ಅಳಿವಿಗೆ ಕಾರಣ. ಆಗಲೇ ತಮ್ಮ ಅಭಿಪ್ರಾಯವನ್ನು ತಿಳಿಸಿ, ನಿಮ್ಮ ಇಷ್ಟಬಂದ ಹಾಗೆ ಮಾಡಿಕೊಳ್ಳಿ ಎಂದು ಹೇಳಿದಿದ್ದರೆ ಚೆನ್ನಾಗಿತ್ತು, ನಾವೇ ಮಾಡಿಕೊಳ್ಳಬಹುದಾಗಿತ್ತು. ಯಾವುದು ತಮಗೆ ಅಪ್ಯಾಯಮಾನವಾಗಿಲ್ಲವೋ ಆಗ ಅದನ್ನು ಟೀಕೆ ಮಾಡುವುದು, ತಮಗೆ ಬೇಕಾದ್ದು ಬಂದರೆ ಆಗ ಬೇರೆ ರೀತಿ ವರ್ತಿಸುವುದು, ನಾಯಕರಾದವರಿಗೆ ಉಚಿತವಲ್ಲ. ಯಾವುದೇ ತೀರ್ಮಾನವನ್ನು ತೆಗೆದುಕೊಳ್ಳುವಾಗ ದೇಶದ 95 ಲಕ್ಷ ಪ್ರಜೆಗಳ ಅಭಿಪ್ರಾಯಕ್ಕನುಗುಣವಾಗಿ ವರ್ತಿಸಬೇಕು, ಬಹಳ ಜವಾಬ್ದಾರಿಯಿಂದ ವರ್ತಿಸಬೇಕು. ಒಬ್ಬರಿಗೊಬ್ಬರಿಗೆ ವಿರಸವಾಗಬಾರದು. ಕೋಮುವಾರು ಭಾವನೆ ಎಂದು ಹೇಳುತ್ತಾರೆ; ಶ್ರೀ ಹನುಮಂತಯ್ಯನವರೂ ಶ್ರೀ ಅನಂತರಾಮಯ್ಯರವರೂ ಒಕ್ಕಲಿಗರೆಂದೇ ಹೇಳುತ್ತಿರಲಿಲ್ಲವೆ? ಈ ವಿಷಯದಲ್ಲಿ ಅವರು ಬೇರೆ ಅಭಿಪ್ರಾಯವನ್ನು ಕೊಟ್ಟ ಮಾತ್ರಕ್ಕೇ ಅವರು ಬೇರೆ ಎಂದು ನಾನು ಹೇಳುವುದಿಲ್ಲ. ದೇಶದ ಹಿತದೃಷ್ಟಿಯಿಂದ ಯಾವ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಹೇಳುತ್ತಿದ್ದೇನೆ. ನಮ್ಮ ಹಿಂದೂ ಧರ್ಮದಲ್ಲಿ, ಯಾರಾದರೂ ನಾಲ್ಕು ಜನ ತಮ್ಮ ಮನೆಯ ಬಾಗಿಲಿಗೆ ಬಂದರೆ ಅವರನ್ನು 'ಬನ್ನಿ ನಮ್ಮಲ್ಲಿದ್ದುದನ್ನು ಊಟಮಾಡಿ' ಎಂದು ಹೇಳುತ್ತಾರೆ. ಜಮೀನಿನ ಹತ್ತಿರ ಊಟ ತೆಗೆದುಕೊಂಡು ಹೋದಾಗ ಕೂಡ ಇದೇ ರೀತಿ ಅತಿಥಿಗಳನ್ನು ಸ್ವಾಗತಿಸುತ್ತಾರೆ. ಇದನ್ನು ನಮಗೆ ಯಾರೂ ಹೇಳಿಕೊಡಬೇಕಾಗಿಲ್ಲ ಅಥವಾ ಯಾವ ಪುಸ್ತಕವನ್ನೂ ಓದಿ ತಿಳಿದುಕೊಳ್ಳಬೇಕಾಗಿಲ್ಲ. ಯಾವ ರೈತನಲ್ಲಿ ಹೋದರೂ ಇದು ಗೊತ್ತಾಗುತ್ತದೆ. ಆದರೆ ಬಂದವರನ್ನೆಲ್ಲಾ ನೀವು ಆಹ್ವಾನಿಸಬೇಕೆಂದು ಹೇಳಿದರೆ, ಅದು ಸಾಧ್ಯವೆ ಎಂದು ನೋಡಬೇಕು. ಶ್ರೀಮಾನ್ ಹನುಮಂತಯ್ಯನವರ ಸಂಸಾರದ ಜೊತೆಗೆ ನಾಲ್ಕು ಸಂಸಾರಗಳು ಬರುತ್ತೇವೆಂದು ಹೇಳಿದರೆ ಅವರನ್ನು ಸೇರಿಸಿಕೊಳ್ಳಲು ಒಪ್ಪಿಕೊಳ್ಳುತ್ತಾರೆಯೆ? ಖಂಡಿತವಾಗಿ ಅದು ಸಾಧ್ಯವಿಲ್ಲ. ಕೆಲವರು ಅವರು ಕಷ್ಟದಲ್ಲಿರುವವರು ಎಂದು ಹೇಳಿದರು. ಶ್ರೀ ವೀರಣ್ಣಗೌಡರು ಅವರಿಗೇನೂ ಕಷ್ಟವಿಲ್ಲ, ಬೇಕಾದಷ್ಟಿದೆ ಎಂದು ಹೇಳಿದರು, ಸಂತೋಷ. ಒಂದು ವೇಳೆ ಕಷ್ಟದಲ್ಲಿರುವುದಾದರೆ, ಮಾಡಬೇಕಾದುದೇನು? ಸುಖೀ ರಾಜ್ಯಸ್ಥಾಪನೆಯಾಗಬೇಕು. ಈ ಗುರಿಯನ್ನು ಮುಟ್ಟಬೇಕಾದರೆ ಯಾವರೀತಿಯ ವ್ಯವಸ್ಥೆಯಿಂದ ಸಾಧ್ಯ ಎಂಬುದನ್ನು ಯೋಚನೆ ಮಾಡಬೇಕು. ಆ ಉದ್ದೇಶವನ್ನು ಸಾಧಿಸುತ್ತೇವೆಂದು ಹೇಳುವುದಾದರೆ ಜನಸಂಖ್ಯೆ, ಆಡಳಿತ ಯಾವರೀತಿ ಇರಬೇಕು ಎಂಬುದನ್ನೆಲ್ಲಾ ನೋಡಬೇಕು. ನಿಮ್ಮಲ್ಲಿ ಒಳ್ಳೆಯ ಆದರ್ಶ ಆಡಳಿತಗಾರರಿದ್ದಾರೆ, ನಮ್ಮದೇ ಬೇರೆ ಸಂಸ್ಥಾನ ಮಾಡಿಕೊಂಡು ನಾವು ಮುಂದುವರಿಯುತ್ತೇವೆ, ನೀವು ಸಹಕಾರ ಸಹಾಯ ನೀಡಿ, ಎಂದು ಕೇಳಿದ್ದರೆ ನಾವು ನಿಜವಾಗಿಯೂ ಸಹಾಯ ಮಾಡಬಹುದಾಗಿತ್ತು. ನಾವೂ ಇನ್ನೂ ಮುಂದುವರಿಯಬೇಕಾಗಿದೆ. ಆದರೂ ಅವರಿಗೂ ಸಹಾಯ ಮಾಡಬಹುದಾಗಿತ್ತು. ನಾವೂ ನೀವೂ ಸಹೋದರರು ಎಂಬ ಭಾವನೆಯನ್ನಿಟ್ಟುಕೊಂಡು ಸಹಾಯ ಮಾಡಬಹುದಾಗಿತ್ತು. ಆದರೆ, ಇದರಲ್ಲಿ ಅವರಿಗೆ ಒಳ್ಳೆಯದು ಮಾಡಬೇಕೆಂಬ ಉದ್ದೇಶವಿಲ್ಲ. ಕರ್ಣಾಟಕ ಚಕ್ರಾಧೀಶ್ವರ ಸಾರ್ವಭೌಮ

(ಶ್ರೀ. ಜಿ. ಎಸ್. ಬೊಮ್ಮೇಗೌಡ.)

ಎಂದು ಹೆಸರು ತೆಗೆದುಕೊಳ್ಳಬೇಕೆಂಬ ಉದ್ದೇಶದಿಂದ ನಾಯಕರು ಹೇಳುತ್ತಿದ್ದಾರೆ ಎಂದು ಜನ ಹೇಳಿದರೆ ನಾನು ತಲೆ ತಗ್ಗಿಸಬೇಕಾಗುತ್ತದೆ. ನಾನಾದರೂ ನನ್ನ ಖಚಿತವಾದ ಅಭಿಪ್ರಾಯವನ್ನು ಕೊಡುತ್ತೇನೆ. ನಾವೆಲ್ಲರೂ ಸಹೋದರರಂತೆ ಬಾಳಬೇಕಾದರೆ, ಒಂದು ಕರ್ಣಾಟಕ ಮಾಡುವುದರಿಂದ ಸಾಧ್ಯವಿಲ್ಲ. ನಮ್ಮಲ್ಲಿ ಶಕುನಗಳಿಗೆ ಪ್ರಾಮುಖ್ಯತೆ ಕೊಡುತ್ತೇವೆ. ಯಾವುದಾದರೂ ಒಂದು ಒಳ್ಳೆಯ ಕಾರ್ಯ ಮಾಡಬೇಕಾದರೆ ಒಳ್ಳೆಯ ಶಕುನವಾಗುತ್ತದೆಯೆ ಎಂದು ನೋಡುವುದು ನಮ್ಮ ಸಂಪ್ರದಾಯ. ಒಳ್ಳೆಯ ಶಕುನವಾದರೆ ಮುಂದೆ ಒಳ್ಳೆಯದಾಗುತ್ತದೆಂದು, ನಂಬುತ್ತೇವೆ. ಆದರೆ ಈ ಒಂದು ಕರ್ಣಾಟಕ ವಿಷಯದಲ್ಲಿ, ಇದು ಪ್ರಾರಂಭವಾದ ಕೂಡಲೇ ಇಷ್ಟುಮಟ್ಟಿಗೆ ಭಿನ್ನಾಭಿಪ್ರಾಯ, ಒಬ್ಬರೊಬ್ಬರಲ್ಲಿ ಭಿನ್ನತೆ ಇರುವಾಗ, ಮುಂದೆ ಎಷ್ಟುಮಟ್ಟಿಗೆ ಹೊಂದಿಕೊಂಡು ಅನ್ಯೋನ್ಯವಾಗಿ ಬಾಳುವುದು ಸಾಧ್ಯ ಎಂಬುದನ್ನು ನಾವು ದೀರ್ಘವಾಗಿ ಯೋಚನೆ ಮಾಡಬೇಕು.

ಒಬ್ಬ ಸದಸ್ಯರು.—ಒಳ್ಳೆಯ ಕೆಲಸಗಳಿಗೆ ಕಂಟಕಗಳು ಜಾಸ್ತಿ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ನನ್ನ ಅಭಿಪ್ರಾಯವನ್ನು ಕೊಡುವುದಾದರೆ, ಕಡ್ಡಾಯವಾಗಿ ಎರಡು ಸಂಸ್ಥಾನಗಳನ್ನು ಮಾಡಿ ಆಡಳಿತಕ್ಕೆ ಸರಿಯಾಗುವಂತೆ ಚಿಕ್ಕದಾಗಿ ಮಾಡುವುದು ಅಗತ್ಯ. ಹಾಗಿಲ್ಲದೆ ಈ ಪ್ರಾಂತ ಪುನರ್ವಿಂಗಡಣಾ ಸಮಿತಿಯವರು ಸಲಹೆ ಮಾಡಿರುವುದೇ ಸರಿ ಎಂದು ಹೇಳುವುದಾದರೆ, ಒಂದು ಕಡೆ ಆರು ಕೋಟಿ ಜನಸಂಖ್ಯೆ, ಇನ್ನೊಂದು ಕಡೆ ಐದು ಕೋಟಿ, ಮತ್ತೊಂದು ಕಡೆ ಒಂದೇ ಕೋಟಿ ಮಾಡಿರುವುದು ಸರಿಯೆ? ಇಡೀ ಭಾರತವನ್ನು ಎರಡುಕೋಟಿ ಅಥವಾ ಒಂದು ಕೋಟಿ ಜನಸಂಖ್ಯೆ ಇರುವ ಪ್ರಾಂತಗಳಾಗಿ ವಿಭಾಗ ಮಾಡಿದ್ದರೆ ಈ ವಿಷಯವನ್ನು ಇಷ್ಟು ಚರ್ಚೆ ಮಾಡುವುದು ಅವಶ್ಯಕವೇ ಇರಲಿಲ್ಲ. ಆದರೆ ಹಾಗೆ ಮಾಡಿಲ್ಲ. ಒಂದೊಂದು ಕಡೆ ಒಂದೊಂದು ರೀತಿ ಇದೆ.

ಇನ್ನೊಂದು ದೃಷ್ಟಿಯಿಂದ ನೋಡೋಣ. ಮೈಸೂರು ದೇಶದಲ್ಲಿರುವ ಕೋರ್ಟುಗಳನ್ನು ನೋಡಿ. ಒಂದೇ ಭಾಷೆ ಆಡುವವರಲ್ಲಿ ಜಗಳಗಳೂ ವ್ಯಾಜ್ಯಗಳೂ ಹೆಚ್ಚಾಗಿವೆಯೋ ಅಥವಾ ಬೇರೆ ಬೇರೆ ಭಾಷೆಗಳನ್ನಾಡುವವರಲ್ಲಿ ಹೆಚ್ಚು ವ್ಯಾಜ್ಯಗಳು ಬಂದಿವೆಯೋ ನೋಡಲಿ. ಒಟ್ಟಿನಲ್ಲಿ ಆಡಳಿತ ಸರಿಯಾಗಿರಬೇಕು. ಆಡಳಿತದಲ್ಲಿ ಬಿಗಿ ಇರಬೇಕು, ಜನರಲ್ಲಿ ಸೌಹಾರ್ದ ಭಾವ ಬರಬೇಕು, ಸುವ್ಯವಸ್ಥಿತವಾದ ರೀತಿಯಲ್ಲಿ ಆಡಳಿತ ನಡೆಯಬೇಕಾದರೆ ಒಂದು ಕೋಟಿ ಪ್ರಜಾಸಂಖ್ಯೆ ಇರುವಂತೆ ಪ್ರಾಂತಗಳನ್ನು ಮಾಡುವುದು ಅವಶ್ಯಕವೆಂದು ಹೇಳಿ, ನನಗೆ ಅವಕಾಶಕೊಟ್ಟ ಸಭಾಪತಿಗಳಿಗೆ ವಂದನೆಗಳನ್ನರ್ಪಿಸುತ್ತೇನೆ.

3 P.M.

ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರ).—ಅಧ್ಯಕ್ಷರೇ, ಈಗ ಕೆಲವಾರು ದಿವಸಗಳಿಂದಲೂ ಈ ಎಸ್.ಆರ್.ಸಿ. ವರದಿಯಮೇಲೆ ನಮ್ಮ ಅನೇಕ ಹಿರಿಯರು ಮಾತನಾಡಿದ ವಿಷಯಗಳನ್ನು ಕೇಳಿ ತಿಳಿದುಕೊಂಡಿದ್ದೇನೆ. ಇಂದೂ ನನ್ನ ಪೂಜ್ಯ ಮಿತ್ರರುಗಳನೇಕರು ಮಾತನಾಡಿದ್ದನ್ನು ಕಿವಿಯಾರ ಕೇಳಿ ಅರ್ಥಮಾಡಿಕೊಂಡಿದ್ದೇನೆ. ಆದರೂ, ನಾನೇನೂ ಮಾತನಾಡಿ ಹೇಳಬೇಕಾದ ವಾದವೇನೂ ಹೆಚ್ಚಿನದಲ್ಲ. ನಮ್ಮ ಹಿರಿಯರು ಆಗಲೇ ನಮಗೆ ಆಶೀರ್ವಾದ ಮಾಡಿದ್ದಾರೆ. ಕಾಂಗ್ರೆಸ್ ಸಂಸ್ಥೆಗೆ ಕಟ್ಟುಬಿದ್ದವರಾಗಿ ನಾವು ಆ ಅಭಿಪ್ರಾಯಗಳನ್ನು ತೆಗೆದುಕೊಳ್ಳಲೇ ಬೇಕು. ಹಾಗಿದ್ದರೂ ನಮ್ಮ ಪೂಜ್ಯರಾದ ಹಾಗೂ ಹಿರಿಯರಾದ ವೀರಣ್ಣಗೌಡರು, ವೆಂಕಟಪ್ಪನವರು ಮತ್ತು ಮರಿಯಪ್ಪನವರು ಮಾತನಾಡಿದಮೇಲೆ ನಾನೂ ಕೂಡ ಒಂದೆರಡು ಅಭಿಪ್ರಾಯಗಳನ್ನು ಕೊಡುವುದು ಅವಶ್ಯಕವೆಂದು ತಿಳಿದಿದ್ದೇನೆ.

ಒಬ್ಬ ಸದಸ್ಯರು.—ಶ್ರೀಮಾನ್ ಮರಿಯಪ್ಪನವರು ಮಾತನಾಡಿಯೇ ಇಲ್ಲವಲ್ಲ.

ಶ್ರೀ ವಿ. ಆರ್. ನಾಯ್ಡು.—ಅವರೂ ಮಾತನಾಡಿದರೆಂದು ನಾನು ತಿಳಿದಿದ್ದೆ. ಇನ್ನುಮೇಲಾದರೂ ಮಾತನಾಡಬಹುದು.

ನನ್ನ ಸ್ನೇಹಿತರುಗಳು ಒಂದು ತೆರದಲ್ಲಿ ಮಾತನಾಡಿದ್ದಾರೆ. ಒಂದು ಕಡೆ ನಾವೆಲ್ಲರೂ ಭಾರತೀಯರು, ದೇಶದ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ, ದೇವರ ದೃಷ್ಟಿಯಲ್ಲಿ ನಾವೆಲ್ಲರೂ ಒಂದೇ ಎಂದು ಮಾತನಾಡುತ್ತಿದ್ದರೆ ಇನ್ನೊಂದು ಕಡೆ ಜಾತಿ-ಜಾತಿ ಎಂಬ ಪೆಡಂಭೂತ ನಮ್ಮನ್ನು ಬಾಧಿಸತೊಡಗಿದೆ. ನನಗಂತೂ ಜಾತಿಯ ವಿಷಯದಲ್ಲಿ ಮಾತನಾಡುವುದಕ್ಕೆ ಇಷ್ಟವಿಲ್ಲದೆ ಇದ್ದರೂ, ಅದನ್ನೇ ಎತ್ತಿ ಕೆಲವು ಸದಸ್ಯರು ಮಾತನಾಡಿದ್ದರಿಂದ ನಾನೂ ಪ್ರಸ್ತಾಪ ಮಾಡುತ್ತಿದ್ದೇನೆ. ಎಲುಬು ಮಾಂಸಗಳಿಂದ ಮಾಡಲ್ಪಟ್ಟ, ಚರ್ಮದಿಂದ ಹೊದಿಸಲ್ಪಟ್ಟ ಈ ದೇಹಕ್ಕೆ ಜಾತಿ ಯಾವುದಪ್ಪ ಎಂದು ಸರ್ವಜ್ಞ ಹೇಳುವುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ಅದನ್ನರಿತರೆ ಜಾತಿ-ಜಾತಿಗಳು ಬೇರೆಯಲ್ಲ ಎಲ್ಲವೂ ಒಂದೇ ಎಂಬ ಭಾವನೆ ನಮ್ಮಲ್ಲಿ ಮೂಡುತ್ತದೆ. ಈ ಮಾತು ನಾನೇ ಹೇಳುತ್ತಿರುವುದೆಂದು ನನ್ನ ಹಿರಿಯರಾರೂ ತಿಳಿದುಕೊಳ್ಳಕೂಡದು. ನನ್ನ ಸ್ವಪ್ರೇರಣೆಯಿಂದ ಆಡುವ ಮಾತುಗಳಲ್ಲ. ವೆಂಕಟೇಶ್ವರಸ್ವಾಮಿಯವರಿಂದ ಪ್ರೇರಿತನಾಗಿ ನಾನಿದನ್ನು ಹೇಳುತ್ತಿದ್ದೇನೆ ಅಷ್ಟೆ. ದೇವರ ಸಾಕ್ಷಿಯಾಗಿ ಇವೆಲ್ಲವೂ ಆ ಸ್ವಾಮಿಯಿಂದ ಪ್ರೇರಿತವಾದುವು.

Sri P. R. RAMAIYA (Basavangudi).—A point of order, Sir. ಮಾನ ಮಿತ್ರರು, ದೇವರು-ದೇವರೆಂದು ಹೇಳಿ ಪ್ರತಿಯೊಂದಕ್ಕೂ ದೇವರ ಹೆಸರನ್ನು ಉಪಯೋಗಿಸಿಕೊಳ್ಳುವುದು ನಮ್ಮ ಶಾಸ್ತ್ರಕ್ಕೆ ವಿರುದ್ಧ.

ಶ್ರೀ ವಿ. ಆರ್. ನಾಯ್ಡು.—ನೀವೆಲ್ಲಾ ಹಿರಿಯರು, ಮಹಾ ದೈವಭಕ್ತರು. ನೀವುಗಳು ಹಾಲು ಕುಡಿದಷ್ಟು ಸಣ್ಣ ಹುಡುಗನಾದ ನಾನು ನೀರನ್ನೂ ಕುಡಿದಿಲ್ಲವೆಂಬುದನ್ನು ತಿಳಿದುಕೊಂಡೂ, ದೇವರಿಂದ ಪ್ರೇರಿತನಾಗಿ ಈ ಎರಡು ಮಾತುಗಳನ್ನು ಹೇಳುತ್ತಿದ್ದೇನೆ. ಈ ಒಂದು ವಿಷಯವನ್ನು ನಾನು ಈ ಸಭೆಯಲ್ಲಿ ಹೇಳದೆ ಇದ್ದರೆ ನಾನು ಅಪರಾಧಮಾಡಿದಂತಾಗುತ್ತದೆ.

ಕೆಲವು ಮಿತ್ರರು ಜಾತೀಯ ಪ್ರಶ್ನೆ ಒಂದಾಗಿತ್ತೆಂದು ವಾದಮಾಡಿದ್ದಾರೆ. ಇನ್ನು ಕೆಲವರು ಜಾತಿ ಹೀಗಾಯಿತು, ಹಾಗಾಯಿತು ಎಂದು ಹೇಳಿದರು. ಆದರೆ ವಾಸ್ತವವಾದ ಒಂದಂಶವನ್ನು ಮರೆತಂತೆ ಕಾಣುತ್ತದೆ.

ಈಗ್ಗೆ ಸಾವಿರಾರು ವರ್ಷಗಳ ಹಿಂದೆ ಮೈಸೂರು ದೇಶ ಹುಟ್ಟುವುದಕ್ಕೆ ಮುಂಚೆ, ಈ ಪ್ರದೇಶವೆಲ್ಲಾ ಒಂದು ಕಾಡು ಪ್ರದೇಶವಾಗಿತ್ತು. ಮೈಸೂರು ದೇಶವೆಂಬ ಹೆಸರೇ ಇರಲಿಲ್ಲ. ಅಲ್ಲಿಂದೀಚೆಗೆ ವಿಜಯನಗರವೆಂಬ ರಾಜ್ಯ ಸ್ಥಾಪನೆಯಾಗಿ ಅದರಲ್ಲಿ ಕಂಚೀಪುರವೆಂಬ ದೇಶವಿದ್ದು ಲಿಂಗಾಯತರೆಂಬ ಜಾತಿಯ

ವರು ಅಲ್ಲಿದ್ದರಂತೆ. ಅದು ಪಾಳೆಯಗಾರರ ಕಾಲ, ಜಬರ್ದಸ್ತು ಮಾಡುವ ಕಾಲ. ಪಾಳೆಯಗಾರರು ಆ ಕಂಚೀಪುರದಲ್ಲಿದ್ದ ಲಿಂಗಾಯಿತರ ಮೇಲೆ ದಂಡಯಾತ್ರೆ ಮಾಡಿ ಥಾಂದಲೆ ನಡೆಸುತ್ತಾರೆಂದು ತಿಳಿದು, ಆ ಜನ ಹೇಗಾದರೂಮಾಡಿ ತಪ್ಪಿಸಿಕೊಂಡು ಬದುಕಿಕೊಳ್ಳುವುದಕ್ಕೆಂದು ಗಾಡಿಗಳನ್ನು ಕಟ್ಟಿಕೊಂಡು ಊರನ್ನು ಬಿಟ್ಟು ಈಗಿನ ಮೈಸೂರಿನ ಹತ್ತಿರವಿರುವ ಪಾಲಾರ ನದಿಯ ಹತ್ತಿರ ಬಂದರಂತೆ. ದುರದೃಷ್ಟವಶಾತ್ ಆ ನದಿಯು ತುಂಬಿ ಹರಿಯುತ್ತಿತ್ತು. ಆ ಜನ ನದಿಯನ್ನು ದಾಟಲು ದಾರಿ ಕಾಣದೆ ಹೆಂಗಸರು ಮಕ್ಕಳಾದಿಯಾಗಿ ದೇವರಲ್ಲಿ ಮೊರೆಯಿಟ್ಟು ಪ್ರಾರ್ಥನೆ ಮಾಡಿದರಂತೆ. ಇನ್ನೇನು ಪಾಳೆಯಗಾರರ ಕಡೆಯವರು ಬಂದು ಅವರನ್ನು ಕೊಲೆಮಾಡುತ್ತಾರೆ. ಆದರೂ ನದಿಯು ಅವರಿಗೆ ಅವಕಾಶ ಕೊಡಲಿಲ್ಲ. ಕೊನೆಗೆ ಪೂಜ್ಯರಾದ ಬಳ್ಳಾರಿ ಸಿದ್ಧಮ್ಮನವರು, ಲಕ್ಷ್ಮೀದೇವಿ ರಾಮಣ್ಣರಂಥ ಮಹಾ ತಪಸ್ವಿಗಳು ತಮ್ಮ ಬೆರಳನ್ನು ಕತ್ತರಿಸಿ ನದಿಯಲ್ಲಿ ಹಾಕಿ ಪ್ರಾರ್ಥನೆ ಮಾಡಿದಾಗ ಆ ಕಾವೇರಿ ಮಾತೆಯು ಒಕ್ಕಲಾಗಿ ದಾರಿ ಬಿಟ್ಟಳಂತೆ. ಆಗ ನದಿಯನ್ನು ದಾಟಿ ಮೈಸೂರಿಗೆ ಬಂದವರೇ ಒಕ್ಕಲಿಗರೆಂದಾದರು. ಈ ಪ್ರಕಾರ ಒಕ್ಕಲಿಗರೆಂಬವರೂ ತೆಲುಗರೇ.

ಒಬ್ಬ ಸದಸ್ಯರು.—ನೀವು ಯಾವ ವಂಶಜರು ?

ಶ್ರೀ ವಿ. ಆರ್. ನಾಯ್ಡು.—ಅದನ್ನೂ ಹೇಳುತ್ತೇನೆ. ನಾವು ಹಿಂದಿದ್ದ ಬಲಿಚಕ್ರವರ್ತಿಯ ವಂಶಜರಾಗಿ ಬಲಿಜಿಗ, ಬಣಜಿಗ ಎಂದು ನಾಮಾಂಕಿತವನ್ನು ಪಡೆದಿದ್ದೇನೆ.

ಈ ಪ್ರಕಾರ ಒಕ್ಕಲಿಗರು ನಮ್ಮ ದೇಶದಲ್ಲಿ ಆದರು. ಮೈಸೂರು ದೇಶ ಆದುದು ಹೀಗೆ. ಹೀಗಿರುವಲ್ಲಿ ಈ S.R.C. ವರದಿ ಬಂದಿರುವಾಗ ಈ ರೀತಿಯ ಹೊಸ ವಾದ ಎದ್ದಿದೆ. ಆಗಿನ ವಿಜಯನಗರ ರಾಜ್ಯದಲ್ಲಿ ಕೆಲವರು ಈ ಕಸಬನ್ನು ಮಾಡುತ್ತಿದ್ದರು, ಇನ್ನು ಕೆಲವರು ಯುದ್ಧಮಾಡುವುದರಲ್ಲಿ ನಿರತರಾಗಿದ್ದರು. ಈಗೇನೋ ನಮ್ಮ ಮಿತ್ರರೇನೋ ತಾವೇ ಪೈರು ಪಚ್ಚೆಗಳನ್ನೂ ಮಾಡುತ್ತೇವೆ, ರಾಜ್ಯವನ್ನೂ ಆಳುತ್ತೇವೆ ಎಂದು ಹೇಳಬಹುದು. ಆದರೂ ಆಗಿನ ಕಾಲದಲ್ಲಿ ಹೀಗೆ ಪ್ರತಿಯೊಂದು ಕೆಲಸಗಳಿಗೂ ಬೇರೆ ಬೇರೆ ಜನರಿದ್ದರು.

ಈ ಸಂದರ್ಭದಲ್ಲಿ ಈ ಕರ್ಣಾಟಕ ರಾಜ್ಯ ಎನ್ನುವುದು ಈಗ ಏತಕ್ಕೆ ಆಗಬಾರದು ಎನ್ನುವುದರ ಬಗ್ಗೆ ಈಗಾಗಲೇ ಕೆಲವು ಹಿರಿಯ ನಾಯಕರುಗಳು ವಾದ ಮಾಡಿದ್ದಾರೆ. ಆದರೆ ನಮ್ಮ ಭಾರತಕ್ಕೆ ಹಿರಿಯ ನಾಯಕರುಗಳಾಗಿರತಕ್ಕಂಥವರೆಲ್ಲಾ ಈಗ ರಾಜ್ಯಗಳ ವಿಂಗಡಣೆಯಾಗಬೇಕೆಂದು ಹೇಳಿರುತ್ತಾರೆ. ಆದರೆ ಈಗ ಈ ಮಾನ್ಯ ಸಭೆಯಲ್ಲಿ ವಿರೋಧಿಸಿ ಮಾತನಾಡಿರತಕ್ಕಂಥ ಈ ನಮ್ಮ ಹಿರಿಯರುಗಳೆಲ್ಲಾ ನನಗೆ ಎಷ್ಟು ವಯಸ್ಸಾಗಿದೆಯೋ ಅವರು ಅಷ್ಟು ವರ್ಷ ಈ ರಾಜಕೀಯದಲ್ಲಿ ಪಳಗಿದವರಾಗಿದ್ದಾರೆ. ಅವರಾದರೂ ಪೂರಾ ಆಲೋಚನೆ ಮಾಡಿಯೋ ಹೀಗೆ ಮಾತನಾಡಿರುತ್ತಾರೆ. ಆದರೆ ಇನ್ನೂ ನಿನ್ನೆತಾನೆ ನಮ್ಮ ಕಾಂಗ್ರೆಸ್ಸಿನ ಕಾರ್ಮಿಕ ವರ್ಗದವರೂ, ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರೂ ಮತ್ತು ಎಂ. ಪಿ. ಸಿ. ಸಿ. ಸದಸ್ಯರೂ ಎಲ್ಲರೂ ಈಗ ಕರ್ಣಾಟಕ ರಾಜ್ಯ ಸ್ಥಾಪನೆಯಾಗಲೇಬೇಕೆಂದು ತೀರ್ಮಾನ ಮಾಡಿಬಿಟ್ಟಿದ್ದಾರೆ. ಈ ವಿಚಾರದಲ್ಲಿ ತೀರ ವಿರೋಧವಿದ್ದಂಥವರಾದರೋ ಅವರು ಹಾಗೆ ಮಾಡಿದರೆ ಹೀಗಾಗುತ್ತದೆ, ಹೀಗೆ ಮಾಡಿದರೆ-ಹಾಗಾಗುತ್ತದೆ ಎಂದು ಮಾತ್ರವೇ ಹೇಳಿದ್ದಾರೆ. ಆದರೆ ಈಗ ನಮಗಾದರೂ ಆಗಿರತಕ್ಕಂಥ ತೊಂದರೆಯೇನು ? ಈಗ ಕರ್ಣಾಟಕ ರಾಜ್ಯ ಸ್ಥಾಪನೆಯಾದರೆ ಮುಂದೆ ತೊಂದರೆಯಾಗುತ್ತದೆ ಎನ್ನುವುದು ಕೆಲವರ ವಾದ. ಆದರೆ ಅದೇನು ತೊಂದರೆಯಾಗುತ್ತದೆ ಎನ್ನುವುದನ್ನು ನಾವೀಗ try ಮಾಡಿ ನೋಡೋಣ. ಅದನ್ನು try ಮಾಡುವುದಕ್ಕೇನು ತೊಂದರೆಯಿದೆ ? ಆದರೆ ಈಗ ತಾನೇ ಮಾತನಾಡಿದ ಶ್ರೀ ಬೊಮ್ಮೇಗೌಡರು ಹೇಳಿದರು ಇದಕ್ಕೆ ದೇಶದಲ್ಲಿ ಬಹಳ ವಿರೋಧವಿದೆ ಎಂದು. ಅದಕಾರಣ ನಾವುಗಳು ನಮ್ಮ ನಮ್ಮ ಚುನಾವಣೆ ಕ್ಷೇತ್ರಗಳಲ್ಲಿ ಜನರ ಅಭಿಪ್ರಾಯ ತೆಗೆದುಕೊಳ್ಳಬೇಕು ಎಂದೂ ಸಹ ಹೇಳಿದ್ದಾರೆ. ಆದರೆ ಅದೂ ಸಹ ನ್ಯಾಯವೇ. ನಾವು ನಮ್ಮ ಕ್ಷೇತ್ರಗಳಲ್ಲಿ ಜನರ ಅಭಿಪ್ರಾಯವೇನಿದೆ, ಹಾಗೂ ಇಡೀ ದೇಶದ ಅಭಿಪ್ರಾಯವೇನಿದೆ ಎನ್ನುವುದನ್ನು ಮತ್ತು ಇತರ ರಾಜಕಾರಿಣಿಗಳ ಅಭಿಪ್ರಾಯವೇನಿದೆ ಎನ್ನುವುದನ್ನೂ ತಿಳಿದುಕೊಳ್ಳಲೇಬೇಕು. ಆದರೆ ನನಗೆ ತಿಳಿದುಬಂದಿರುವ ಮಟ್ಟಿಗೆ ಕೆಲವು ಪ್ರದೇಶಗಳಲ್ಲಿ ಮುಕ್ಕಾಲು ಭಾಗದ ಜನರು ಕರ್ಣಾಟಕ ಬೇಕು ಎಂದು ಹೇಳುತ್ತಿದ್ದರೆ ಇನ್ನು ಕಾಲು ಪಾಲು ಜನರು ಅದು ಬೇಡ ಎಂದು ಹೇಳಬಹುದು. ಮತ್ತೆ ಕೆಲವು ಕಡೆಗಳಲ್ಲಿ ಮುಕ್ಕಾಲು ಭಾಗದ ಜನರು ಕರ್ಣಾಟಕ ಬೇಡ ಎಂದು ಹೇಳುತ್ತಿದ್ದರೆ ಇನ್ನು ಕಾಲು ಪಾಲು ಜನರು ಅದು ಆಗಲೇಬೇಕೆಂದು ಹೇಳಬಹುದು. ಅಷ್ಟೇ ಹೊರತು ಬೇರೆಯೇನೂ ಇಲ್ಲ. ಆದರೆ ಈ ದಿವಸ ನಮ್ಮ ಕಾರ್ಮಿಕ ಕ್ಷೇತ್ರದಲ್ಲಿ 60 ಸಾವಿರ ಜನಗಳಿದ್ದಾರೆ. ಆದರೆ ಇಲ್ಲಿಯವರೆಗೂ ಅಲ್ಲಿ ಈ ಪ್ರಶ್ನೆಯ ಬಗ್ಗೆ ಜಾತಿ ಮತಗಳ ಪ್ರಸ್ತಾಪವೇ ಬಂದಿಲ್ಲ. ಆದರೆ ನಾನು ಚುನಾವಣೆಗೆ ನಿಂತಿದ್ದಾಗ ಮನೆಯಲ್ಲಿ ಹಣ ಬಿದ್ದಿದ್ದರೂ ಸಹ ಅದನ್ನು ಬಿಟ್ಟು ಬಂದು ನನಗೆ ಓಟ್ ಮಾಡಿದಂಥ ಕೆಲವು ಒಕ್ಕಲಿಗರೂ ಆ ಗುಂಪಿನಲ್ಲಿದ್ದಾರೆ. ಆದರೆ ನಾನು ಅವರನ್ನು ಈ ಕರ್ಣಾಟಕ ಪ್ರಶ್ನೆಯ ಬಗ್ಗೆ ನಿಮ್ಮ ಅಭಿಪ್ರಾಯಗಳೇನೆಂಬುದಾಗಿ ಕೇಳಿದ್ದಕ್ಕೆ ಅವರೆಲ್ಲರೂ "ನಾವು ನಮ್ಮೆಲ್ಲರ ಪರವಾಗಿ ನಿಮ್ಮನ್ನು ಚುನಾವಣೆ ಮಾಡಿ ಆ ರಾಜಕೀಯ ರಂಗಕ್ಕೆ ಕಳುಹಿಸಿದ್ದೇವೆ. ಆ ಬಗ್ಗೆ ಈ ದಿವಸ ಏನು ಮಾಡಬೇಕೆಂಬ ವಿಷಯವನ್ನು ನಾವು ನಿಮಗೇ ಬಿಟ್ಟುಕೊಟ್ಟಿದ್ದೇವೆ. ನೀವೇ ಸೂಕ್ತ ತೋರಿದಂತೆ ಮಾಡಿ." ಎಂದು ಹೇಳಿರುತ್ತಾರೆ. ಆ ಸಭೆಯಲ್ಲೂ ಕೂಡ ಅನೇಕ ಹಿರಿಯರಿದ್ದರು. ಅವರೂ ಸಹ ಹೀಗೇ ಹೇಳಿದ್ದಾರೆ. ನಮ್ಮನ್ನು ಇಲ್ಲಿಗೆ ಆರಿಸಿ ಕಳುಹಿಸಿರತಕ್ಕಂಥ ಜನರಲ್ಲಿ ಎಲ್ಲ ಕೋಮಿನವರೂ ಇದ್ದಾರೆ. ಎಲ್ಲಾ ಭಾಷೆಗಳನ್ನಾಡತಕ್ಕ ಜನರೂ ಇದ್ದಾರೆ. ಸಾಮಾನ್ಯವಾಗಿ ನಮ್ಮ ಈ ಬೆಂಗಳೂರಿನಲ್ಲಿ ಹೆಚ್ಚಿಗೆ ತಮಿಳು ಮಾತನಾಡತಕ್ಕವರೂ, ಅವರಿಗೆ ಕಡಮೆ ಎಂದರೆ ತೆಲುಗು ಮಾತನಾಡತಕ್ಕವರೂ ಅನಂತರ ಕನ್ನಡ ಮಾತನಾಡತಕ್ಕವರೂ ಹೀಗೆ ಇರುತ್ತಾರೆ. ಆದರೆ ಇವರೆಲ್ಲರೂ ಈ ಹೊತ್ತು ಕರ್ಣಾಟಕ ಆಗಬೇಕೆಂದೇ ಹೇಳುತ್ತಿದ್ದಾರೆ. ಇದೇ ವಿಚಾರವನ್ನು ದೇಶದ ಚರಿತ್ರೆಗಳೂ, ಪುರಾಣಗಳೂ, ಅನೇಕ ಕವಿಗಳೂ ಮತ್ತು ದೇಶದಲ್ಲಿರತಕ್ಕಂಥ ಮಹಾ ಮಹಾ ನಾಯಕರುಗಳೂ ಸಾರಿ ಹೇಳುತ್ತಿದ್ದಾರೆ. ಅದೇ ರೀತಿ ನಾನೂ ಸಹ ಈ ದಿವಸ ಈ ಕರ್ಣಾಟಕವಾಗಲೇಬೇಕೆಂಬ ಕೂಗನ್ನೆತ್ತಿದ್ದೇನೆ. ಈ ನನ್ನ ಕೂಗು ಆ ತಿರುಪತಿ ಶ್ರೀ ವೆಂಕಟರಮಣನ ಕೂಗೇ ವಿನಾ ಬೇರೆಯಲ್ಲ. ಈ ಕೂಗು ಅನೇಕರಿಗೆ ಕೇಳಿಸಿದೆ. ಅದಕ್ಕಾಗಿಯೇ ಶ್ರೀ ವೆಂಕಟಪ್ಪನವರೂ ಸಹ ತಿರುಪತಿಗೆ ಹೋಗಬೇಕೆಂದಿದ್ದರು. ಆದರೆ ಅದೇನು ಕಾರಣವೋ ಅವರಿನ್ನೂ ಹೋಗಿಲ್ಲ, ಆ ದೇವರೇ ಅವರಿಗೂ ಈ ರೀತಿ ಹೇಳಿರ

(ಶ್ರೀ ಪಿ ಆರ್. ನಾಯ್ಡು)

ಬೇಕು. ಅವರನ್ನೇ ತಾವು ಯಾರು ಬೇಕಾದರೂ ಕೇಳಿ, ಅವರೇ ಹೇಳುತ್ತಾರೆ. ಈ ಕರ್ಣಾಟಕವಾದರೆ ಮುಂದೇನೋ ಆಗಿಹೋಗುತ್ತದೆ ಎನ್ನುವಂಥ ಒಂದು ಭಯ ಕೆಲವರಿಗಿದೆ. ಹಾಗೆ ಒಂದು ವಿನಾ ಕಾರಣ ತೊಂದರೆಯನ್ನು ಈ ಒಕ್ಕಲಿಗರಿಗೇ ಮಾಡಲು ಆ ಲಿಂಗಾಯಿತರಿಗೇನು ಕೊಂಬಿದೆಯೇ? ಅವರು ಅದೇನು ಮಾಡುತ್ತಾರೆ ನೋಡೋಣ. ದೇವರೇ ನನಗೆ ಈ ಮಾತುಗಳನ್ನು ಆಡಿಸುತ್ತಿದ್ದಾನೆ. ಆದರೆ ಈಗ ಒಕ್ಕಲಿಗರ ಕೋಮು ವಿಚಾರ ಹಾಗಿರಲಿ, ಈ ದಿವಸ ಈ ಕೋಮಿನವರಿಗಿಂತಲೂ ಮೈನಾರಿಟಿಯಾಗಿ ರತಕ್ಕಂಥ ನಾನಾ ಕೋಮಿನ ಜನರು ದೇಶದಲ್ಲಿಲ್ಲ ವೇನು? ನಾನಿಲ್ಲವೇ? ಈ ದಿವಸ ಬೇರೆ ದೇಶಗಳಲೆಲ್ಲಾ ಯಾವರೀತಿಯಾಗಿ ನಡೆಯುತ್ತಿದೆ ಎನುವುದನ್ನು ನೋಡಿ ತಾವೆಲ್ಲರೂ ರಾಜಕೀಯದಲ್ಲಿ ಅರಿತು ನುರಿತವರು; ಬುದ್ಧಿವಂತರು. ಇಷ್ಟಾಕ್ಕಾಗಿಯೇ ತಾವೇಕೆ ಇಷ್ಟು ಇದನ್ನು ವಿರೋಧಿಸಬೇಕು? ಆದರೆ ಈ ಕರ್ಣಾಟಕ ರಾಜ್ಯ ಆಗಲೇಬೇಕೆಂಬ ಕೂಗು ಈ ದಿವಸದ್ದಲ್ಲ. ಅನೇಕ ವರ್ಷಗಳಿಂದ ಅನೇಕ ವೇದಾಂತಿಗಳೂ ಸಹ ಹೇಳಿದ್ದಾರೆ. ಅನೇಕ ಹಿರಿಯರೂ, ರಾಜಕೀಯ ತಜ್ಞರೂ ದೇಶ ದೊಡ್ಡದಾಗಬೇಕು, ಸಂಸಾರ ದೊಡ್ಡದಾಗಬೇಕು ಎಂತಲೇ ಹೇಳುತ್ತಿದ್ದಾರೆ. ಆದ್ದುದರಿಂದ ನಾವೀಗ ಇದನ್ನು ಪರೀಕ್ಷೆಮಾಡಿ ನೋಡುವಂಥ ಕಾಲ ಒದಗಿಬಂದಿದೆ. ಅದನ್ನು ಪರೀಕ್ಷಾರ್ಥವಾಗಿಯಾದರೂ ಮಾಡಿನೋಡೋಣ. ಈ ಕರ್ಣಾಟಕವಾದರೆ ಇದರಿಂದ ಲಾಭವಾಗುತ್ತನೆಯೇ ಅಥವಾ ಲುಕ್ಸಾನಾಗುತ್ತದೆಯೇ ಎನ್ನುವುದನ್ನು ಕಾದುನೋಡೋಣ ಇದನ್ನು ಮಾಡಿನೋಡೋಣ. ಈ ಕರ್ಣಾಟಕದ ವಿಚಾರ ಮಾತನಾಡುವುದರ ಸಂದರ್ಭದಲ್ಲೇ ಅನೇಕರು ನಮ್ಮ ಶ್ರೀಮನ್ ಮಹಾರಾಜರವರ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ನಮ್ಮ ಶ್ರೀಮನ್ ಮಹಾರಾಜರ ವಿಷಯದಲ್ಲಿ ಎಲ್ಲಾ ಜನರೂ ತುಂಬಾ ಗೌರವ, ಪ್ರೀತಿ, ವಿಶ್ವಾಸಗಳನ್ನು ಇಟ್ಟುಕೊಂಡಿದ್ದಾರೆ. ಇದರಲ್ಲಿ ಯಾರಿಗೂ ಸಂದೇಹವಿಲ್ಲ. ಎಲ್ಲರಿಗಿಂತಲೂ ನನಗೆ ಅವರಲ್ಲಿ ಒಂದು ಹೆಚ್ಚಿನ ಭಕ್ತಿ, ಗೌರವಗಳಿವೆ. ಅದರೆ ಭಂಗಾರದ ಕತ್ತಿ ಎಂದು ಕೊರಳುಕೊಯ್ದು ಕೊಳ್ಳುವುದಕ್ಕಾಗುತ್ತದೆಯೆ? ದೇಶದಲ್ಲಿರತಕ್ಕಂಥ ರಾಜ-ಮಹಾರಾಜರುಗಳನ್ನೆಲ್ಲಾ ತೆಗೆದುಹಾಕಬೇಕೆಂದಿರುವಾಗ ಅವರೆಲ್ಲರೂ ಹೋಗಲಿ ಪರವಾಇಲ್ಲ. ಆದರೆ ನಮ್ಮ ಮೈಸೂರಿನ ರಾಜರೊಬ್ಬರನ್ನು ಮಾತ್ರ ಉಳಿಸಿ ಕೊಡಿ ಅಂದರೆ ಇದೇನು ಅರ್ಥ? ಇಲ್ಲಿಯವರೆಗೂ ದೇಶದಲ್ಲಿತಕ್ಕಂಥ ಜನತೆಯ ಮತ್ತು ಎಲ್ಲಾ ಕಾರ್ಮಿಕವರ್ಗಗಳ ಕೂಗೂ ದೇಶದಲ್ಲಿ ರಾಜರ ಆಡಳಿತ ಇರಬಾರದು ಎಂದು ಹೇಳಿದ್ದಾಗ ಈ ದಿವಸ ಕೆಲವರು ನಮ್ಮ ಮೈಸೂರಿನ ರಾಜರೊಬ್ಬರು ಮಾತ್ರ ಇರಲಿ ಎಂದು ಹೇಳುವುದು ಅಷ್ಟು ಸರಿಯಾದ್ದಲ್ಲ, ಸಮಂಜಸವಾದುದೂ ಅಲ್ಲ. ಅವರು ಈ ದಿವಸ ಕೇವಲ ನಮ್ಮ ಮೈಸೂರು ಒಂದಕ್ಕೆ ಮಹಾರಾಜರಾಗಿರಬಹುದು. ಆದರೆ ನಾಳೆ ಅವರು ಇಡೀ ಕರ್ಣಾಟಕಕ್ಕೇ ಗೌರ್ನರ್ ಆದರೆ ಆಗ ಅವರ ಕೀರ್ತಿ ಗೌರವಗಳು ಇನ್ನೂ ಹೆಚ್ಚಾಗುವುದಿಲ್ಲವೇ? ದೇವರು ಅವರಿಗೆ ಅದಕ್ಕಿಂತ ಇನ್ನೂ ದೊಡ್ಡ ಸ್ಥಾನಮಾನಗಳನ್ನು ಘನತೆ ಗೌರವಗಳನ್ನು ಕೊಡಲಿ. ಇಡೀ ಭಾರತದ ಜನತೆಗೂ ಮತ್ತು ನಮ್ಮ ಕೇಂದ್ರಸರ್ಕಾರಕ್ಕೂ ಈ ನಮ್ಮ ಮಹಾರಾಜರ ಮೇಲೆ ಬಹಳ ಗೌರವವಿದೆ, ಪ್ರೀತಿ ಆದರಗಳಿವೆ. ಆದಕಾರಣ ನಮ್ಮ ಈ ಮೈಸೂರಿನ ಸ್ಥಾನಮಾನಕ್ಕೆ ಯಾವ ಧಕ್ಕೆಯೂ ಬರುವುದಿಲ್ಲ. ನಮ್ಮ ಮಹಾರಾಜರಿಗೂ ನಮಗೂ ಇರತಕ್ಕಂಥ ಸ್ಥಾನಮಾನಗಳು ಇದ್ದೇಇರುತ್ತವೆ. ಯಾರೂ ಈ ವಿಚಾರವಾಗಿ ಎಳ್ಳಷ್ಟೂ ಅನುಮಾನಪಡಬೇಕಾದ ಅವಶ್ಯಕತೆಯಿಲ್ಲ. ಅಂಥಾದ್ದಕ್ಕೆ ಕಾರಣವೂ ಇಲ್ಲ. ಈಗಾಗಲೇ ಕೆಲವು ಹಿರಿಯ ಮಂತ್ರಿಗಳೂ ಮಾತನಾಡಿದ್ದಾರೆ. ಆ ಪೈಕಿ ಒಬ್ಬ ಮಂತ್ರಿಗಳು ಮಾತ್ರ ಈಗ ಈ ಕರ್ಣಾಟಕವನ್ನು ವಿರೋಧಿಸಿದ್ದಾರೆ. ಆದರೆ ಅವರು ಅಷ್ಟು ವಿರೋಧಿಸಬೇಕಾಗಿದ್ದರೆ ಅದರಲ್ಲಿ ಕೆಲವು ಅಂಥ ತೊಂದರೆಗಳಿರಬಹುದು. ಆದರೆ ಈ ರಾಜಕೀಯದಲ್ಲಿರತಕ್ಕವರಿಗೆ ಅನೇಕ ಹುಚ್ಚುಗಳಿರುತ್ತವೆ. ಆ ಪೈಕಿ ಒಂದು ಯಾವುದೆಂದರೆ ಅವರು ತಮ್ಮ ಚುನಾವಣೆ ಕ್ಷೇತ್ರ ಯಾವುದಿದೆಯೋ ಅಲ್ಲಿಗೆ ಹೋಗಿ ಈ ಬಗ್ಗೆ ಜನರ ಅಭಿಪ್ರಾಯ ಪಡೆಯಲು ತೊಂದರೆಯಿರಬಹುದು. ಆದರೆ ಇದೇ ಸಂಬಂಧದಲ್ಲಿ ಮೂರು ಜನ ಮಂತ್ರಿಗಳು ತಮ್ಮ ಮಂತ್ರಿಸ್ಥಾನಕ್ಕೆ ರಾಜೀನಾಮೆ ಕೂಡ ಕೊಡುವುದಕ್ಕೆ ಸಿದ್ಧವಾಗಿದ್ದಾರೆಂಬ ವದಂತಿಯನ್ನೂ ಸಹ ನಾನು ಕೇಳಿದ್ದೇನೆ. ಆದರೆ ಇದೆಷ್ಟು ನಿಜವೋ ಅಥವಾ ಸುಳ್ಳೋ ಆ ಸಂಗತಿ ಗೊತ್ತಿಲ್ಲ. ನಮ್ಮಂಥ ಸಾಮಾನ್ಯ ಸದಸ್ಯರಾಗಿದ್ದರೆ ಪರವಾ ಇರುತ್ತಿರಲಿಲ್ಲ. ಆದರೆ ಆ ಮಂತ್ರಿಸ್ಥಾನದಲ್ಲಿ ರಾಜೀನಾಮೆ ಕೊಡತಕ್ಕ ಸ್ಥಾನಕ್ಕೆ ಜನರು ಒಂದು ಕ್ಯೂನಲ್ಲಿ ಕಾದುನಿಂತಿದ್ದಾರೆ. ಆದಕಾರಣ ನಾನು ಈಗ ಹಾಲಿ ಇರತಕ್ಕ ಮಂತ್ರಿಗಳಿಗೆ ಆ ರೀತಿ ರಾಜೀನಾಮೆ ಕೊಡಬಾರದೆಂದು ಕೇಳಿಕೊಳ್ಳುತ್ತೇನೆ. ಇನ್ನು ಶ್ರೀ ಎಚ್. ಕೆ. ವೀರಣ್ಣಗೌಡರು ನಾನಾಗಲೇ ಹೇಳಿದಂತೆ ಹಿರಿಯರು, ಬುದ್ಧಿವಂತರು, ದೊಡ್ಡ ರಾಜಕೀಯ ಜ್ಞಾನರು, ರಾಜಕೀಯದಲ್ಲಿ ಬಹಳ ಅರಿತು ನುರಿತವರು—ಇಂಥವರೂ ಸಹ ಕೇವಲ ಈ S.R.C. ವರದಿಗೋಸ್ಕರವಾಗಿಯೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇವೆಂದು ಹೇಳಿರುತ್ತಾರಂತೆ. ಆದರೆ ಹಾಗೆಮಾಡುವುದು ಚೆನ್ನಾಗಿಲ್ಲ. ಹಾಗೂ ಒಂದುವೇಳೆ ಅವರು ಅಕಸ್ಮಾತ್ ರಾಜೀನಾಮೆ ಕೊಟ್ಟರೆ ನಾನಾಗಲೇ ಹೇಳಿದಂಥ ಆ ಕ್ಯೂ ಇದ್ದೇ ಇದೆ. ಆದಕಾರಣ ಹಾಗೆ ತಾವು ಮಾಡಬೇಡಿ ಎಂದು ನಾನು ಅವರನ್ನು ಕೇಳಿಕೊಳ್ಳುತ್ತೇನೆ. 2 ಕೋಟಿ ಕನ್ನಡಿಗರು ಸೇರಿ ಸಂತೋಷದಿಂದ ಒಂದು ದೊಡ್ಡ ರಾಜ್ಯ ಕಟ್ಟುವಂಥ ಒಂದು ಸುಸಂದರ್ಭ ಬಂದಿದೆ. ಈ ಕರ್ಣಾಟಕ ನಿರ್ಮಾಣವಾಗಬೇಕೆನ್ನುತ್ತಿರುವ ಕಾಲದಲ್ಲಿ ಶುಭಶಕುನಗಳಾಗಬೇಕಾಗಿತ್ತು. ಆದರೆ ಅಲ್ಲಲ್ಲೇ ಗಲಾಟೆ ಶಬ್ದಗಳು ಕೇಳಬರುತ್ತಿವೆ. ನಮ್ಮ ಹಿರಿಯ ಕಾಂಗ್ರೆಸ್ ನಾಯಕರಾದ ಶ್ರೀ ಎಚ್. ಕೆ. ವೀರಣ್ಣಗೌಡರು ಎಲ್ಲಾ ವಿಚಾರಗಳನ್ನೂ ಹೇಳಿದರು. ಅವರು ಹೇಳಿದ್ದೆಲ್ಲಾ ನಿಜ. ಆದರೆ ನಾನು ಅವರ ಭಾಷಣವನ್ನು ಬಹಳ ಗಮನವಿಟ್ಟು ಕೇಳಿದೆ. ಅವರು ತಮ್ಮ ಭಾಷಣದ ಕೊನೆಯಲ್ಲಿ ಈ ಕರ್ಣಾಟಕ ಪ್ರಾಂತ್ಯಕ್ಕೆ ತಮ್ಮ ವಿರೋಧವಿದೆ ಎಂದು ಮಾತ್ರ ಹೇಳಿರುವುದಿಲ್ಲ. ಈ ಮಾತು ಒಂದನ್ನು ಮಾತ್ರ ಅವರು ಸೂಚಿಸಿಲ್ಲ. ಹೀಗಾದರೆ ಹಾಗಾಗುತ್ತದೆ—ಹಾಗಾದರೆ ಹೀಗಾಗುತ್ತದೆಂದು ಮಾತ್ರ ಹೇಳಿದ್ದಾರೆ. ಸಾಮಾನ್ಯವಾಗಿ ಇಂಥ ಶುಭಕಾರ್ಯಗಳಾಗತಕ್ಕ ಕಾಲದಲ್ಲಿ ಎರಡು ತರಹೆಯ ಶಕುನಗಳಿರುತ್ತವೆಂದು ಇಂಗ್ಲೀಷಿನಲ್ಲಿ ಹೇಳಿರುತ್ತಾರೆ, ಒಂದು 'good beginning and bad ending' ಎಂದು ಹೇಳುತ್ತಾರೆ. ಇನ್ನೊಂದು 'bad beginning and good ending' ಎಂದು ಹೇಳುತ್ತಾರೆ. ಆದಕಾರಣ ಈ ಎರಡನೇ ಶಕುನದ ಪ್ರಕಾರ ಇದೊಂದು ಶುಭಶಕುನವೇ ಆಗಿದೆ. ಆದಕಾರಣ ಕರ್ಣಾಟಕ-

ಪ್ರಾಂತ್ಯ ನಿರ್ಮಾಣವಾಗಿಯೇ ಆಗುತ್ತದೆ. ಆದರೆ ಈ bad beginning ನಲ್ಲಿ ಒಂದು ಎಚ್ಚರಿಕೆಯನ್ನು ಕೊಟ್ಟಂತಾಗಿದೆ. ಮುಂದೆ ಈ ಕರ್ಣಾಟಕ ರಾಜ್ಯ ವಾದನಂತರ ಏನೇನು ತೊಂದರೆಗಳಾಗಬಹುದು ಎಂದು ಈಗಲೇ ಒಂದು ಮುನ್ನೆಚ್ಚರಿಕೆಯನ್ನು ಹಾಡಿ ದ್ದಾರೋ ಅಂಥ ತೊಂದರೆಗಳಿಗೆ ಅವಕಾಶ ಕೊಡ ದಂತೆ ಮಾಡಿದರೆ ಎಲ್ಲಾ ಸರಿಹೋಗುತ್ತದೆ, ಆದರೆ ಮುಂದೆ ಅಂಥ ತೊಂದರೆಗಳೇನಾದರೂ ಸಂಭವಿಸ ಬಹುದೇ ಎನ್ನುವುದನ್ನು ನಾವೆಲ್ಲರೂ ಕಾದು ನೋಡ ಬೇಕಾಗಿದೆ. ಈ ಒಂದು ಈ ವಿರೋಧ ಪಕ್ಷದ ಎಚ್ಚರಿಕೆ ಯಿಂದ ನಾವು ನಮ್ಮ ಮುಂದಿನ ಆಡಳಿತವನ್ನು ಬಹಳ ಎಚ್ಚರಿಕೆಯಿಂದ ನಡೆಸಿಕೊಂಡು ಹೋಗಬೇಕೆಂದು ಹೇಳಿದಹಾಗಾಯಿತು. ಯಾವ ಒಂದು ಕೋಮಿನವ ರಿಗೂ ತೊಂದರೆಗಳಾಗದಿರುವಂತೆ ಆಡಳಿತ ನಡೆಸ ಬೇಕಾಗಿರುತ್ತದೆ.

ಇನ್ನು ಮಾಗಡಿ ಕೆಂಪೇಗೌಡನ ವಿಚಾರವಾಗಿ ಅನೇಕರು ಅನೇಕಸಲ ವಾದಮಾಡಿದ್ದಾರೆ. ಅವರು ಯಾರೆಂದರೆ ಪೂರ್ವಕ್ಕೆ ಅವರು ಪಕ್ಕ ಆಂಧ್ರರು. ಆ ದೇಶದಲ್ಲಿ ಅವರು ತಮ್ಮ ಹೊಟ್ಟೆ ಹೊರೆಯಲಾರದ ಕಾರಣ ಅವರು ಗಂಟುಮೂಟೆ ಹೊತ್ತುಕೊಂಡು ನಮ್ಮ ಸೀಮೆಗೆ ಬಂದರು. ಅವರ ಜನ್ಮ ಸ್ಥಳ ಚಿತ್ತೂರಿಗೆ 26 ಮೈಲಿ ದೂರದಲ್ಲಿರತಕ್ಕಂಥ ಚಂದ್ರ ಗಿರಿ ಎಂಬುದು. ಆ ಸ್ಥಳದಿಂದ ಆ ಕೆಂಪೇಗೌಡ ಮತ್ತು ಆತನ ತಮ್ಮ ರಂಗೇಗೌಡ ಇಬ್ಬರೂ ಇಲ್ಲಿಗೆ ಬಂದು ನೆಲಸಿದರು. ಆದ ಪ್ರಯುಕ್ತ ಅವರು ಪಕ್ಕ ಆಂಧ್ರರು. ಅವರು ತಮ್ಮ ಜೀವನೋಪಾಯಕ್ಕಾಗಿ ಅವರ ದೇಶವನ್ನು ಬಿಟ್ಟು ನಮ್ಮ ದೇಶಕ್ಕೆ ಬಂದರು. . . .

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ-ಗುಡಿ ಬಂಡೆ).—ಇವರು ಯಾವುದೋ ಒಂದು ಕಥೆ ಹೇಳುತ್ತಿದ್ದಾರೆ. ಇವರು ಹೇಳಿದ್ದು ಸರಿಯಾದ್ದಲ್ಲ.

4 P. M.

ಶ್ರೀ ವಿ. ಆರ್. ನಾಯ್ಡು.—ಕೊನೆಯ ಮಾತನ್ನು ಹೇಳುತ್ತಾ ಕರ್ಣಾಟಕ ಪ್ರಾಂತ ಆಗುವುದರಲ್ಲಿ ದೇಶದ ಪ್ರತಿಯೊಬ್ಬರ ಆಶೀರ್ವಾದಬೇಕು ಎಂದು ದೇಶದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏಕೆಂದರೆ ನಮ್ಮನ್ನು ಚುನಾವಣೆ ಮಾಡಿದ ಮಹಾಜನರು ನಮ್ಮಲ್ಲಿ ವಿಶ್ವಾಸ ಇಟ್ಟುಕೊಂಡಿರುವುದರಿಂದ ನಾವು ಈ ವರದಿಯಮೇಲೆ ಏನು ಹೇಳುತ್ತೇವೆ ಎಂಬುದನ್ನು ಯೋಚನೆಮಾಡು ತ್ತಾರೆ. ಅದರಲ್ಲಿ ಗೊತ್ತಿರುವವರೂ ಯೋಚನೆಮಾಡು ತ್ತಾರೆ, ಗೊತ್ತಿಲ್ಲದೆ ಇರುವವರೂ ಸಹ ಯೋಚನೆ ಮಾಡುತ್ತಾರೆ. ಇಂತಹ ಜನತೆಯನ್ನು ಕೆಲವು ಕಾಲ ಕಾದು ನೋಡಬೇಕೆಂದು ವಿನಯದಿಂದ ಪ್ರಾರ್ಥನೆ ಮಾಡುತ್ತೇನೆ. ಕೊನೆಯಲ್ಲಿ ಈ ಕರ್ಣಾಟಕ ಪ್ರಾಂತ ಆಗುವುದಕ್ಕೆ ನಾವೆಲ್ಲರೂ ಕೂಡ ಸಹಕಾರ ನೀಡ ಬೇಕು. ಕರ್ಣಾಟಕ ಪ್ರಾಂತ ಆಗುವುದರಲ್ಲಿ ಯಾವ ವಿಧವಾದ ತೊಂದರೆಯೂ ಬರಲಾರದು. ಕನ್ನಡ ನಾಡು ಒಂದಾಗಬೇಕು. ಅನೇಕ ವರ್ಷಗಳಿಂದ ಇದ್ದ ಕನಸು ನನಸಾಗಬೇಕು. ಇದಕ್ಕೆ ತಮ್ಮೆಲ್ಲರ ಸಂಪೂರ್ಣ ಸಹಕಾರಬೇಕು ಎಂದು ಪ್ರಾರ್ಥನೆಮಾಡಿ ಕೊಂಡು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri K. PATTABHIRAMAN (Kolar).—Mr. Speaker, I have followed the debate on the report of the Fazl Ali Commission very closely. I must admit, Sir, that on some occasions at least, it caused me intense pain, but often-times I have heard it with great pleasure. I do not want to develop that aspect of it, since being too near to the incident and to the debate of these days, it should be not serving a good turn to this House if I developed it. I leave the matter there.

Sir, before I state my remarks on the report proper, there are one or two preliminary things upon which I would like to make some observations. The first and the foremost is my very great regret that in regard to this report certain expressions should have been used on the floor of the House which I should rather consider very unfortunate, particularly the expression used by the Minister for Law and Eduation, the Hon'ble Sri A. G. Ramachandra Rao. Possibly, but for that expression I should not have referred to it at all. No doubt, to some extent, Sri Mascarenhas made an atonement to this House by telling the House how exactly he felt and we ought to feel on a report of this kind. I should rather think possibly certain reasons which must have influenced the Hon'ble Minister for Education very seriously, upon which he might have genuinely and sincerely felt differently, must have been sufficient reason for him that certain expressions should come out from him. . . .

Sri A. G. RAMACHANDRA RAO.—I should like to know what those expressions are?

Sri K. PATTABHIRAMAN.—That it should be confined to a place, not to this House. . . .

Sri A. G. RAMACHANDRA RAO.—The alternative thing I have not suggested; it may be kept in a shelf. Therefore, there are so many other alternatives.

Sri K. PATTABHIRAMAN.—The Education Minister has begun to educate us. I feel, Sir, I know what the debate meant. When an expression is made on the floor of the House by some Hon'ble Member that it should go to a dustbin or a waste-paper basket . . .

Sri A. G. RAMACHANDRA RAO.—I did not say that.

Sri K. PATTABHIRAMAN.—I know I have been a good debater myself. Excuse me, Sir, I do not claim it in

(SRI K. PATTABHIRAMAN.)

any sense of ego, but I know when a member interjected and when an expression like that is made in an emotional-outburst, the Speaker smiles, what does it mean? I leave the matter there. I feel certain that a time will come when even Sri Ramachandra Rao will look at this document in a proper perspective. After the dust of opposition has subsided, when the storm has become calmer and when passions that are growing, go down, I am sure, the work turned out by these three wise men, three patriotic statesmen will stand out for all time. I know that when we look at this report, we find certain issues face us there; those issues are vital to some individuals and some individuals might have worked themselves up to a certain pitch on them that when they do not find satisfaction in the general picture of the report, it is possible we miss the entire picture as it were because on the particular issue which was vital to us we are not satisfied. I can understand that feeling. I can certainly appreciate that feeling and I can even say I am prepared to give due deference to that. But nevertheless; I appeal and I plead and beseech Sri A. G. Ramachandra Rao to look at this Report from a broader aspect. What is it that we find in the Report? In fact, my own feeling is this: I have gone through this Report at very great length. Let me also make this position clear. When I read this Report, did not look at it from any particular sectional standpoint. I read it from page to cover and tried to see what is the all-India picture that they want to emerge and what are the basic conditions given. When I turned the pages of this document which was prepared by the three wise statesmen, loyal and patriotic statesmen, I tried to see whether there was any mistake in the basic or fundamental aspect of their way of looking at things or the way of understanding the problems. It is that that evoked my admiration and I felt I would be failing in my duty if I did not tell this House what I felt with great humility and beseech them, whatever they may feel on the Karnataka issue or that issue or this, or whatever we might feel on a particular section of the Report, let us be fair to it, let us be fair to ourselves and see the document from that angle. If this document is placed in the hands of an Indian, it is quite possible, being so near to the target, being so near to the issue, we might miss its merits. But if it is placed in the hands of anybody outside India, I am sure without any fear of contradiction I am prepared to say that these three wise men will be acclaimed throughout the world that they have brought forth a document in the ablest manner, considering the stupendous task and issues involved, that they are building up a country not for the immediate future but for centuries to come. Considering all the stupendous problems, the document that they have given is something that is not only exhilarating but one to evoke a deep debt of gratitude from us for that. I leave the matter there.

So far as this Report is concerned, I want certain aspects of it to be considered. I appeal to this House to bear with me if I do not refer to the Karnataka issue *vis-a-vis* Mysore at the outset. I shall come to it presently. But I want this House to first of all understand the import of this Report in a larger perspective. At this stage, there is one observation which I must make. While sponsoring this motion before this House, the Hon'ble Chief Minister has taken a stand which I must appreciate and admire. He has shown what I might characterise as courage and candour and imagination at a stage like this when passions are running so high, when sectional issues such as we see in Mysore are increasing tension and exercising the minds of everybody and when there are feelings for and against rising so high; at this stage, here is one man who has courageously said: "I stand for this ideal". I am saying this not because I want to plead for him. I know there are some Hon'ble Members of this House who are so friendly towards me that they sometimes feel, not often, when I give a praise to Sri Hanumanthaiya that it was mistaken. But I feel my public life is sufficiently well-known to most of the Hon'ble Members of this House and

when I praise a person it will be because I feel like that and I say so whatsoever may be the reactions of other persons. After all, I always believe that I must satisfy my own conscience; I must satisfy my own feelings when I make an expression irrespective of the fact what exactly was the reaction that it might occasion in other Apart from that, I want this House to consider one other thing. As the speeches in this House are going to be transcribed and sent to Delhi, I want that it must appear that so far as this Report is concerned, there are two aspects which have really been considered by this House in respect of which our pronouncements are required. One is that it should be very clear that the all-India picture which the Report envisages has been before us and has been considered, and correlated to the sectional picture, we have also to consider the place, the position and the role that Mysore has to have in the days to come. Another thing I want to refer to is that for these three years, I feel, in my humble opinion, that we have had a real debate in this House only on this issue. I am not characterising them in any way. Some Hon'ble Members may have spoken corrosively, but nevertheless I know their sincerity; I know their intense feeling; I know their patriotism; their *bona fides* are never doubted so far as I am concerned. As a matter of fact, it is for the first time that we have had a real debate of this kind; various issues have come out; various ideas have come out and we have discussed them in detail; there has been perfect clash of ideas and we have had real debate. And therefore, it is from that perspective that I want this report to be considered. Before we come to the issue of Karnataka and Mysore, I should rather think we should first see the Report from the all-India stand—point and then come from the general, the universal to the particular. That is the law of logic; that is the law of nature. What is the universal aspect of this Report? As I have been able to see for the first time, I find from this Report that there is absolutely no idea of carving out pure linguistic States in India. My humble opinion is that I should think it is a profound misunderstanding and misappreciation of the whole picture as it emerges from the Report if we really think that these three wise and patriotic men wanted to carve out linguistic states. As a matter of fact, if we go through the Report from page to cover and look at the different pargraphs and see how different States have been brought into existence, what are the checks and counter-checks, how the whole thesis of the Report has been worked out I should rather think here is an attempt made not to carve out pure linguistic states. As a matter of fact, one Hon'ble Member doubted that there is going to be an over-dose of linguism in the proposed new states and that linguism as such was a menace to society. I want him and every Hon'ble Member of this House to look at this Report closely. In fact I have tried to understand the Report very clearly and I concluded that there was absolutelyno idea whatever to carve out lingustic states. A number of passages, chpater and verse can be quoted just to show that on certain occasions they have even subordinated linguistic consideration, and linguistic emphasis, because they felt the more important ones like administrative, or the economic or some other consideration was the overriding consideration and so they would not even hesitate to subordinate linguistic consideration.

Sri H. K. VEERANNA GOWDH.—I may bring to the notice of the Hon'ble Member that a decision taken by the High Command of the Ruling Party in India is that the proposed States will be brought into existence only on linguistic basis, for example, Karnataka, Vishala Andhra, Maharastra, Gujarat and what not.

